ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮಾರ್ಚ್ 2023 ಮಾಸ ಪತ್ರಿಕೆ

ಸಂಪುಟ/Volume : 45
ಸಂಚಿಕೆ/Issue : 6
ಪುಟ/Pages : 12
ಬೆಲೆ/Price : ₹ 15/–

Akhila Karnataka Shikshaka Samachar | March 2023 | Monthly

ಯುಗಾದಿ ಹಬ್ಬದ ಹೊಸ ಸಂವತ್ಸರವು
ಪ್ರಕೃತಿಯಲ್ಲಿ ಮಾತ್ರ ಬದಲಾವಣೆಯನ್ನು ತರದು.
ಬದಲಾಗಿ, ನಮ್ಮ ಜೀವನದುದ್ದಕ್ಕೂ
ಶುಭ ಬದಲಾವಣೆಗಳನ್ನು ತರುವುದು



## ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು

A Journal of Karnataka Rajya Madhyamika Shikshaka Sangha (R.)

## ಹೊಸ ವರುಷವನ್ನು ಹೊಸ ಆಲೋಚನೆಗಳು, ಹೊಸ ಕಾರ್ಯಶೈಲಿಗಳೊಂದಿಗೆ ಸ್ವಾಗತಿಸೋಣವೇ ?

ಪ್ರಕೃತಿ ನವಚೈತನ್ಯವನ್ನು ಪಡೆದು ಹಸಿರು-ಹಸಿರಾಗಿ ನವೀಕರಣ ಹೊಂದುತ್ತಿರುವ ಚೈತ್ರಮಾಸದ ಪ್ರಾರಂಭವನ್ನು ಯುಗಾದಿಹಬ್ಬದೊಂದಿಗೆ ನವ ಉತ್ಸಾಹ-ಉಲ್ಲಾಸದೊಂದಿಗೆ ಆಚರಿಸಬೇಕು. ಹಿಂದೂ ಪಂಚಾಂಗದ ಪ್ರಕಾರ ಹೊಸ ವರುಷದ ಪ್ರಥಮ ಹಬ್ಬ ಯುಗಾದಿ. ಯುಗದ ಆದಿ ಎಂದೇ ಕರೆಯಲ್ಪಡುವ ಈ ಹಬ್ಬದ ಸಮಯಕ್ಕೆ ಪ್ರಕೃತಿಯೂ ಸಹ ಹೊಸತನವನ್ನು ಪಡೆದು ಕಂಗೊಳಿಸುತ್ತಿರುತ್ತದೆ. ನಮಗೆಲ್ಲರಿಗೂ ಉಲ್ಲಾಸವನ್ನು ತುಂಬುವ ಮತ್ತು ಅಭಿವೃದ್ಧಿಯ ಸೂಚಕವಾದ ಹಸಿರು ಬಣ್ಣ ಎಲ್ಲೆಡೆ ಪಸರಿಸಿರುತ್ತದೆ. ದೈಹಿಕವಾಗಿ ಎಷ್ಟೇ ವಯಸ್ಸಾದರೂ ಮಾನವರು ಸಹ ಮಾನಸಿಕವಾಗಿ ಹೊಸತನವನ್ನು ಪಡೆದು ಕಾರ್ಯಪ್ರವೃತ್ತರಾಗಬೇಕೆಂದು ಪ್ರಕೃತಿ ಸೂಚ್ಯವಾಗಿ ಹೇಳುತ್ತದೆ.

ಸಂಘಟನೆಯ ಕಾರ್ಯಕರ್ತರು ಇದಕ್ಕೆ ಹೊರತಲ್ಲ. ಹಳೆಯವೆಲ್ಲವ ಮರೆತು ಹೊಸತೊಂದು ಯೋಚನೆಯೊಂದಿಗೆ, ಯೋಜನೆಯೊಂದಿಗೆ ಸಂಘಟನಾ ಕಾರ್ಯದಲ್ಲಿ ಪ್ರವೃತ್ತರಾಗಬೇಕು. ಹಳೆಬೇರಿನೊಂದಿಗೆ ಹೊಸ ಚಿಗುರು ಬರುವಂತೆ, ಹಿರಿಯ ಮಾರ್ಗದರ್ಶಕರ ಅನುಭವದೊಂದಿಗೆ ಹೊಸ ಕಾರ್ಯಕರ್ತರು ನಾವೀನ್ಯತೆಯೊಂದಿಗೆ ಸಂಘಟನಾ ಕಾರ್ಯಗಳನ್ನು ಮಾಡಬೇಕು. ಯುಗಾದಿಯ ದಿನದಂದು ಬೇವು ಬೆಲ್ಲವನ್ನು ಸ್ವೀಕರಿಸುವುದೇ ಸಿಹಿ-ಕಹಿಗಳನ್ನು ಸಮನಾಗಿ ಸ್ವೀಕರಿಸಬೇಕು ಎಂಬುದರ ದ್ಯೋತಕ. ಹಾಗೆಯೇ ಸಂಘಟನೆಯಲ್ಲಿ ತೊಡಗಿರುವವರು ವಿವಿಧ ಸ್ಥಳಗಳಿಂದ, ವಿವಿಧ ಮಾನಸಿಕತೆಗಳಿಂದ ಬಂದವರಾಗಿರಬಹುದು. ಕೆಲವೊಂದು ಕಹಿ ಘಟನೆಗಳು ನಡೆಯುಬಹುದು. ಶಿಕ್ಷಕ ಸಮುದಾಯಕ್ಕೆ ಒಳಿತಾಗುವ ಕಾರ್ಯಗಳು ಆಗಿರಬಹುದು. ಒಳಿತಾದಾಗ ಹಿಗ್ಗದೇ, ಕಹಿ ಘಟನೆಗಳು ನಡೆದಾಗ ಕುಗ್ಗದೇ, ಹಿರಿಯರ ಅನುಭವದ ನುಡಿಗಳು ಹಾಗೂ ಹಿತನುಡಿಗಳೊಂದಿಗೆ ಸಮಾಜದ ಏಳಿಗೆಗೆ ಶ್ರಮಿಸುವ ಕಾರ್ಯಕರ್ತರಾಗಬೇಕು. ಕಹಿ ಘಟನೆಗಳು ನಡೆದಾಗ ಕಾರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಆತ್ಮಾವಲೋಕನ ಮಾಡಿಕೊಂಡು ಒಳಿತಾಗುವುದಾದರೆ ತಗ್ಗಿ-ಬಗ್ಗಿ ಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆಯುವುದು ಒಳಿತು. ನಿಸ್ವಾರ್ಥಿಯಾಗಿ ಸೇವೆ ಮಾಡಲು ಬಂದವರಾಗಿರುವವರು ಕಹಿ ಘಟನೆಗಳಿಗೆ ಜಗ್ಗದೇ ತಮ್ಮ ಗುರಿಯೆಡೆಗೆ ಅಡೆತಡೆಯನ್ನೆಲ್ಲಾ ದಾಟಿ ಮುನ್ನಡೆಯುತ್ತಾರೆ. ಸಮಾಜದ ಏಳಿಗೆಗೆ ಶ್ರಮಿಸುವವನಿಗೆ ಯಾವುದೇ ಸ್ವಾರ್ಥ ಭಾವನೆಗಳು ಇರಬಾರದು. "ಮುಖಿಯಾ ಮುಖ ಸೋ ಚಾಹಿಏ, ಖಾನ-ಪಾನ್ ಕೋ ಏಕ್, ಪಾಲೈ ಪೋಸೈ ಸಕಲ ಅಂಗ ತುಲಸಿ ಸಹಿತ ವಿವೇಕ" ಎಂಬುದು ತುಲಸಿದಾಸರ ಒಂದು ದೋಹೆ. ಇದರರ್ಥ ನಾಯಕನಾದವನು ಬಾಯಿಯ ರೀತಿಯಲ್ಲಿ ಕೆಲಸ ಮಾಡಬೇಕು, ಕಹಿಯೋ ಸಿಹಿಯೋ ಎಲ್ಲವನ್ನು ಬಾಯಿ ಶರೀರವನ್ನು ಪಾಲನೆ-ಪೋಷಣೆ ಮಾಡಲು ಸ್ವೀಕರಿಸುತ್ತದೆ. ಹಾಗೆಯೇ ಸಮಾಜದ ಏಳಿಗೆಯ ಬಗ್ಗೆ ಯೋಚಿಸುವವರೆಲ್ಲರೂ ನಾಯಕರೇ. ಕಹಿ-ಸಿಹಿಯನ್ನು ಏಕರೂಪವಾಗಿ ಸ್ವೀಕರಿಸಿ, ಸಮಾಜದ ಏಳಿಗೆಯ ಕಾರ್ಯದಲ್ಲಿ ತನ್ಮಯತೆಯಿಂದ ಕಾರ್ಯಪ್ರವೃತ್ತರಾಗಬೇಕು.

### ಯುಗಾದಿ ಹಬ್ಬದ ಶುಭಾಶಯಗಳು

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಎಲ್ಲಾ ಕಾರ್ಯಕರ್ತ ಬಂಧುಗಳಿಗೆ ಯುಗಾದಿ ಹಬ್ಬದ ಶುಭಾಶಯಗಳು. ಭಗವಂತ ಎಲ್ಲಾ ಕಾರ್ಯಕರ್ತ ಬಂಧುಗಳಿಗೆ ಆರೋಗ್ಯ, ಆಯುಷ್ಯವನ್ನು ನೀಡಿ ಸಮಾಜದ ಏಳಿಗೆಯ ಕಾರ್ಯದಲ್ಲಿ ನವೋಲ್ಲಾಸದಿಂದ ಕಾರ್ಯಪ್ರವೃತ್ತರಾಗುವ ಮಾನಸಿಕತೆಯನ್ನು ನೀಡಲಿ ಎಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಆಶಿಸುತ್ತದೆ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಮಹರ್ಷಿ ಅರಬಿಂದೊ ಅವರ ಶಿಕ್ಷಣ ಚಿಂತನೆಗಳು 3
- ಉಪನಿಷದಾಧಾರಿತ ಶಿಕ್ಷಣಮ್ 4
- ರಾಜಕುಮಾರಿ ಅಮೃತಾ ಕೌರ್ 5
- ಶಿಕ್ಷಕರ ಆದರ್ಶ 6
- ಸ್ವಾಮಿ ವಿವೇಕಾನಂದರು ಹೇಳಿದ ಸಂಘಟನಾ ಸೂತ್ರಗಳು 7
- ಏಕಾತ್ಮತಾ ಸ್ತೋತ್ರ 8
- ಮಕ್ಕಳಿಗೆ ಸಕಾರಾತ್ಮಕ ಅನುಭವಗಳು ಹೆಚ್ಚಲಿ 10
- ಅಭ್ಯಾಸ ವರ್ಗ – ಒಂದು ವರದಿ 11
- KRMSS ನ ಅಭ್ಯಾಸ ವರ್ಗ 12

## ಮಹರ್ಷಿ ಅರಬಿಂದೊ –150 ವಿಶೇಷ ಲೇಖನ

# ಮಹರ್ಷಿ ಅರಬಿಂದೊ ಅವರ ಶಿಕ್ಷಣ ಚಿಂತನೆಗಳು



ಮಹರ್ಷಿ ಅರವಿಂದರು ಆಧುನಿಕ ಭಾರತದ ಶ್ರೇಷ್ಠ ಚಿಂತಕರು, ರಾಜಕೀಯ ಮುತ್ಸದ್ದಿ, ಶಿಕ್ಷಣ ತಜ್ಞ ಹಾಗೂ ಯುವಜನತೆಗೆ ಸ್ಫೂರ್ತಿಯಾಗಿದ್ದರು. ಅವರೋರ್ವ ಶ್ರೇಷ್ಠ ಬರಹಗಾರರು ಆಗಿದ್ದರು. ಅವರ ದೃಷ್ಟಿಯಲ್ಲಿ ಶಿಕ್ಷಣದ ಗುರಿಗಳು ಎರಡು. ಮೊದಲನೆಯದಾಗಿ ಶಿಕ್ಷಣ ವ್ಯಕ್ತಿಯನ್ನು ಸ್ವಸ್ಥ ಸಮಾಜದ ಉತ್ತಮ ಪ್ರಜೆಯನ್ನಾಗಿ ಮಾಡುವುದು. ತನ್ನ ಸಮಾಜದ ಇತರ ಸದಸ್ಯರೊಂದಿಗೆ ಸುಮಧುರ ಸಂಬಂಧವನ್ನಿಟ್ಟುಕೊಂಡು ಸಮಾಜದ ಅಭಿವೃದ್ಧಿಯಲ್ಲಿ ಬದ್ಧತೆಯಿಂದ ತನ್ನ ಕರ್ತವ್ಯವನ್ನು ಮಾಡುವಂತಹವನಿರಬೇಕು. ಶಿಕ್ಷಣ ಅವನಿಗೆ ಆರೋಗ್ಯಯುತ ದೇಹ, ಮನಸ್ಸು, ಬುದ್ಧಿ ಹಾಗೂ ಅಧ್ಯಾತ್ಮದ ಬೆಳವಣಿಗೆಗೆ ಅನುವು ಮಾಡಿಕೊಡಬೇಕು. ಉತ್ತಮ ವ್ಯಕ್ತಿತ್ವವನ್ನು ಹೊಂದಿ ಸಂಯಮದಿಂದ ತನ್ನ ಹಾಗೂ ತನ್ನ ಸುತ್ತ–ಮುತ್ತಲಿರುವ ಇತರರ ಅಭಿವೃದ್ಧಿಯಲ್ಲಿ ಆತ ಸದಾ ನಿರತನಾಗಿರುವಂತೆ ಶ್ರಮಿಸಬೇಕು.

ಅರವಿಂದರ ಮೂಲ ಕಲ್ಪನೆಯಂತೆ ಪ್ರತಿಯೊಬ್ಬ ಮಗುವಿನಲ್ಲೂ ದೈವಿಕಶಕ್ತಿ ಅಡಗಿದೆ. ಅದರ ಸಹಾಯದಿಂದ ಅವನು ಜೀವನಯಾತ್ರೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸಲು ಸಾಧ್ಯವಿದೆ. ಈ ಶಕ್ತಿಯನ್ನು ಅವನು ಪೂರ್ಣವಾಗಿ ಉಪಯೋಗಿಸಲು ಶಕ್ಯನಾಗುತ್ತಾನೆ. ಪ್ರತಿ ಮಗುವಿನ ವ್ಯಕ್ತಿತ್ವದಲ್ಲೂ ತನ್ನದೇ ಆದ ಧರ್ಮ, ಅವನದೇ ಆದ ಬೆಳವಣಿಗೆಯ ನಿಯಮಗಳು, ಅವನದೇ ಆದ ಅವಶ್ಯಕತೆಗಳು ಹಾಗೂ ಅವನದೇ ಆದ ಸಾಧನಾ ಶಕ್ತಿ ಅಡಗಿದೆ. ಶಿಕ್ಷಣದ ಗುರಿ ಈ ಶಕ್ತಿಗಳನ್ನು ಸಕಾರಾತ್ಮಕವಾಗಿ ವಿಕಸನಗೊಳ್ಳುವಂತೆ ಮಾಡುವುದಾಗಿದೆ. ಅರವಿಂದರ ದೃಷ್ಟಿಯಲ್ಲಿ ವ್ಯಕ್ತಿಯ ವ್ಯಕ್ತಿತ್ವ ವಿಕಸನದ ಕಾರ್ಯದಲ್ಲಿ ಅವನಲ್ಲಿರುವ ಐದು ಬಗೆಯ ಸಹಜ ಸಾಮರ್ಥ್ಯಗಳಿವೆ. ಅವು ಯಾವುವೆಂದರೆ; ದೈಹಿಕ ಶಕ್ತಿ, ಜೈವಿಕ ಶಕ್ತಿ, ಮಾನಸಿಕ ಶಕ್ತಿ, ನಿಸರ್ಗಾತೀತ ಶಕ್ತಿ ಹಾಗೂ ಆಧ್ಯಾತ್ಮಿಕ ಶಕ್ತಿ.

ಜೀವನ ಪ್ರಕ್ರಿಯೆಯ ಗುರಿ ಪರಿಪೂರ್ಣತೆಯನ್ನು ಪಡೆಯುವುದು. 'ಶರೀರ ಮಾಧ್ಯಂ ಖಲು ಧರ್ಮ ಸಾಧನಂ' ಎಂಬಂತೆ ಪರಿಪೂರ್ಣ ಶಾರೀರಿಕ ಬೆಳವಣಿಗೆ ಜೀವನ ಸಾಧನೆಗೆ ಮೂಲಮಂತ್ರ. ದೇಹವು ಧಾರ್ಮಿಕ ಜೀವನದಲ್ಲಿ ಪೂರ್ಣ ಸಿದ್ಧಿಯನ್ನು ಪಡೆಯುವ ದಾರಿಯಾಗಿದೆ.

ದೈಹಿಕ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಅರವಿಂದರು ಐದು ಅಂಶಗಳನ್ನು ಒತ್ತಿಹೇಳುತ್ತಾರೆ. ಮೊದಲನೆಯದಾಗಿ ವ್ಯಕ್ತಿ ಆರೋಗ್ಯಯುತ ದೇಹಸೌಷ್ಟವವನ್ನು ಹೊಂದಿರಬೇಕು. ಅದಕ್ಕಾಗಿ ಆರಂಭದಿಂದಲೇ ಮಕ್ಕಳಿಗೆ ಉತ್ತಮವಾದ ದೈಹಿಕ ಶಿಕ್ಷಣ ದೊರೆಯಬೇಕು. ಯೋಗಾಸನಗಳ ಮೂಲಕ ದೇಹವನ್ನು ಆರೋಗ್ಯಯುತವನ್ನಾಗಿ ಮಾಡಬಹುದು. ಅದರೊಂದಿಗೆ ಸಮತೂಕದ ಆಹಾರವನ್ನು ಮಕ್ಕಳಿಗೆ ಒದಗಿಸಬೇಕು. ಇದರಿಂದಾಗಿ ದೇಹಕ್ಕೆ ಶಕ್ತಿ ಸಾಮರ್ಥ್ಯಗಳು ಬರುತ್ತವೆ. ಅದರೊಂದಿಗೆ ಇಂದ್ರಿಯ ಶಕ್ತಿಯ ತರಬೇತಿ ಸರಿಯಾದ ರೀತಿಯಲ್ಲಿ ಕೊಟ್ಟಾಗ ಅವನಲ್ಲಿ ಹೊಂದಾಣಿಕೆ, ದೇಹಾಕರ್ಷಣೆ, ಸೌಂದರ್ಯಗಳು ಮೂಡಿ ಬರುತ್ತವೆ.

ಈ ರೀತಿಯ ಯೋಜಿತ ತರಬೇತಿ ಅವನಲ್ಲಿ ಶಿಸ್ತು, ಧೈರ್ಯ, ತನ್ನ ಶಕ್ತಿಯಲ್ಲಿ ನಂಬಿಕೆ ಹಾಗೂ ವ್ಯಕ್ತಿ ನೈಪುಣ್ಯವನ್ನು ತುಂಬುತ್ತದೆ. ಈ ರೀತಿಯ ಸಾಮರ್ಥ್ಯಗಳನ್ನು ಪಡೆದ ವ್ಯಕ್ತಿ ಸಹಕಾರ, ಸಮದರ್ಶಿತ್ವ ಮನೋಭಾವ ಹಾಗೂ ಪಕ್ಷಪಾತವಿಲ್ಲದ ಧರ್ಮನಿಷ್ಠೆ ಅವನಲ್ಲಿ ಕೂಡಿ ಬರುತ್ತದೆ.

ಜೈವಿಕ ಶಿಕ್ಷಣ ವಿಚಾರದಲ್ಲಿ ಅರವಿಂದರ ಅಭಿಪ್ರಾಯಗಳು ವಿಶಿಷ್ಟವಾಗಿವೆ. ಶಿಕ್ಷಣವು ಮಗುವಿನ ಆಶೋತ್ತರಗಳು, ಸಂವೇದನೆ, ಭಾವನೆಗಳು, ಭಾವೋದ್ರೇಕ, ಕಾಯಕಶಕ್ತಿ, ಸಂಕಲ್ಪ ಹಾಗೂ ಪ್ರಚೋದನೆಗಳಿಗೆ ಪ್ರತಿಕ್ರಿಯೆ, ಸ್ವಾಮ್ಯಾಶಕ್ತಿಯ ಮನೋಭಾವ ಹಾಗೂ ಇತರ ಸಹಜ ಪ್ರವೃತ್ತಿಗಳಾದ ಕೋಪ, ಭಯ, ದುರಾಸೆ ಹಾಗೂ ಕಾಮುಕತೆಗಳ ವಿಚಾರಗಳನ್ನು ಸೂಕ್ಷ್ಮವಾಗಿ ಗಣನೆಗೆ ತಂದುಕೊಂಡು ಸಕಾಲದಲ್ಲಿ ಅವುಗಳನ್ನು ಸಾಧುಗೊಳಿಸುವ ಪ್ರಯತ್ನ ಮಾಡಬೇಕು. ಶಿಸ್ತನ್ನು ಬಲಾತ್ಕಾರವಾಗಿ ಮಕ್ಕಳ ಮೇಲೆ ಹೇರುವುದು ವಾಸ್ತವಿಕವಾಗಿ ಹಾನಿಕಾರಕವಾಗಬಹುದು. ಕಥೆಗಳನ್ನು ಹೇಳುವುದು, ಓದುವುದು– ಈ ಪ್ರಕ್ರಿಯೆಗಳ ಮೂಲಕ ಮಕ್ಕಳಿಗೆ ಉತ್ತಮ ವಿಚಾರಗಳನ್ನು ತಾನು ಸರಿ ಎಂಬ ಭಾವನೆ ಅವನಲ್ಲಿ ಮೂಡುವಂತೆ ಮಾಡುವುದರಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಆದುದರಿಂದ ಈ ರೀತಿಯ ನೈತಿಕ ತರಬೇತಿಯಲ್ಲಿ ಮಗುವಿನ ಸ್ವಚಿಂತನೆಗೆ ಸೂಚನೆಗಳು ಪೂರಕವೇ ವಿನಃ ಬಲಾತ್ಕಾರದ ಹೇರುವಿಕೆ ಸಲ್ಲದು. ಪಾಲಕರಾಗಲೀ, ಶಿಕ್ಷಕರಾಗಲೀ ಈ ವಿಚಾರದಲ್ಲಿ ಮಾರ್ಗದರ್ಶಕರೇ ವಿನಃ ಆಜ್ಞಾಧಾರಕರಾಗ ಬಾರದು. ಮಗುವನ್ನು ಸರಿಯಾದ ದಾರಿಯಲ್ಲಿ

ಪುಟ 9 ಕ್ಕೆ ➤

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ. – ಅಕ್ಕಮಹಾದೇವಿ

# ಉಪನಿಷದಾಧಾರಿತ ಶಿಕ್ಷಣಮ್

ಡಾ॥ ಮಹಾಬಲೇಶ್ವರ ಎಸ್.ಭಟ್‌:
ಪ್ರಾಚಾರ್ಯಾಃ ವೇದ ವಿಜ್ಞಾನ ಗುರುಕುಲಮ್,
ಚನ್ನೇನಹಳ್ಳಿ

## ಪರಿವರ್ತನೆ ಜಗದ ನಿಯಮ

ಕಾಲವು ಸದಾ ಪರಿವರ್ತನಾಶೀಲ. 'ಗಚ್ಛತೀತಿ ಜಗತ್'. ಅರ್ಥಾತ್ ಯಾವುದು ನಿರಂತರ ಚಲನಶೀಲವೋ ಅದು ಜಗತ್ತು. ಇದನ್ನೇ ಪರಮ ಸಿದ್ಧಾಂತವಾಗಿ ಒಪ್ಪಿ ಅದರ ಆಧಾರದಲ್ಲಿಯೇ ಬದುಕುತ್ತಿರುವವರು ಭಾರತೀಯರು. ಇದು ಎಲ್ಲ ಕ್ಷೇತ್ರಗಳಿಗೂ ಅನ್ವಯವಾಗುವ ವಿಷಯ. ಶಿಕ್ಷಣ, ರಾಜಕೀಯ, ಆರ್ಥಿಕ, ಜ್ಞಾನ, ವಿಜ್ಞಾನ, ತಂತ್ರಜ್ಞಾನ ಎಲ್ಲ ಕ್ಷೇತ್ರಗಳೂ ನಿತ್ಯ ಪರಿವರ್ತನಾಶೀಲಗಳು. ಎಷ್ಟು ವೇಗವಾಗಿ ಜಗತ್ತಿನಲ್ಲಿ ಪರಿವರ್ತನೆಗಳಾಗುತ್ತವೆ ಎಂಬುದನ್ನು ಇಂದಿನ ಸಮಾಜವನ್ನು ನೋಡಿದರೆ ಅರ್ಥವಾಗುತ್ತದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಎಲ್ಲಕ್ಕಿಂತ ಹೆಚ್ಚು ವೇಗವಿದೆ. ಶಿಕ್ಷಣಕ್ಕಂತೂ ಈ ಸಿದ್ಧಾಂತ ಎಲ್ಲ ಕಾಲದಲ್ಲಿಯೂ ನೇರವಾಗಿ ಅನ್ವಯವಾಗುವಂತಹದ್ದು. ನಿತ್ಯವೂ ನೂತನ ವಿದ್ಯಾರ್ಥಿಗಳು ಬರುವ ವ್ಯವಸ್ಥೆ ಶಿಕ್ಷಣ. ಆಯಾಯಾ ಕಾಲೀನ ಅವಶ್ಯಕತೆಯನ್ನು ಅಪೂರ್ತಿಮಾಡುವ ಸಮುದಾಯವನ್ನು ಸೃಷ್ಟಿಮಾಡುವ ಗುರುತರವಾದ ಹೊಣೆಗಾರಿಕೆ ಶಿಕ್ಷಣ ಕ್ಷೇತ್ರದ್ದಾಗಿದ್ದರಿಂದ, ಶಿಕ್ಷಣದಲ್ಲಿ ಶಿಕ್ಷಣಕ್ಷೇತ್ರದಲ್ಲಿ ಪರಿವರ್ತನೆ ಆಗುವುದು ಅನಿವಾರ್ಯ. ಶಿಕ್ಷಣದ ಬದಲಾವಣೆಯಂತೆ ಸಮಾಜದ ಬದಲಾವಣೆ. ಸಮಾಜದ ಅವಶ್ಯಕತೆಯಂತೆ ಶಿಕ್ಷಣದಲ್ಲಿ ಬದಲಾವಣೆ ಎಂಬುದು ಸಮಾಜ ಮತ್ತು ಶಿಕ್ಷಣಕ್ಕೆ ಇರುವ ಅನ್ಯೋನ್ಯ ಸಂಬಂಧ. ಕಾಲದ ಅವಶ್ಯಕತೆಗಳನ್ನು ಪೂರೈಸುವುದು ಶಿಕ್ಷಣ ಕ್ಷೇತ್ರದ ಗುರುತರವಾದ ಹೊಣೆಗಾರಿಕೆ ಹೇಗೋ, ಹಾಗೆಯೇ ಸಮಾಜದಲ್ಲಿ ಸತ್ವವನ್ನು, ನಮ್ರತನವನ್ನು, ಶಾಶ್ವತವಾದ ಮೌಲ್ಯಗಳನ್ನು ಉಳಿಸಿಕೊಳ್ಳುವುದೂ ಶಿಕ್ಷಣದ್ದೇ ಜವಾಬ್ದಾರಿ. ಸಮಾಜ ದೂಷಿತವಾಗಿದೆ ಎಂದರೆ ಇದರರ್ಥ ಶಿಕ್ಷಣದ ವ್ಯವಸ್ಥೆ ಕುಸಿದಿದೆ ಎಂದೇ ಅರ್ಥ.

## ಶಿಕ್ಷಣಕ್ಕೆ ಭಾರತವೇ ಮಾದರಿ

ಒಂದು ಕಾಲದಲ್ಲಿ ಶಿಕ್ಷಣಕ್ಕೆ ಮಾದರಿಯೆಂದರೆ ಭಾರತ. ಇಲ್ಲಿನ ಜ್ಞಾನ–ವಿಜ್ಞಾನಗಳ ಸಾಧನೆ ಇಡೀ ಜಗತ್ತನ್ನೇ ನಿಬ್ಬೆರಗಾಗಿಸುವಂತೆ ಇತ್ತು. ಇಡೀ ಜಗತ್ತೇ ನಮ್ಮನ್ನು ಗುರುವೆಂದು ಒಪ್ಪಿಕೊಂಡಿತ್ತು. ಅದಕ್ಕೆ ಕಾರಣ ಇಲ್ಲಿನ ಅಧ್ಯಾತ್ಮ ಮತ್ತು ಸಮಾಜದ ಮೇಲೆ ಇಲ್ಲಿನ ಶಿಕ್ಷಣ ಪದ್ಧತಿಯ ಪರಿಣಾಮ. ಪ್ರತಿಯೊಂದು ವಿದ್ಯೆಯೂ ಗುರುಕುಲ ಮಾದರಿಯಲ್ಲಿ ಕಲಿಸುತ್ತಿದ್ದ ಕಾಲವೊಂದಿತ್ತು. ಪ್ರಧಾನವಾಗಿ ಶಸ್ತ್ರವಿದ್ಯೆ ಮತ್ತು ಶಾಸ್ತ್ರ. ಶಸ್ತ್ರ ವಿದ್ಯೆಯೆಂದರೆ ಕೇವಲ ಯುದ್ಧಕಲೆ ಅಷ್ಟೇ ಅಲ್ಲ. ಎಲ್ಲ ಕುಲವಿದ್ಯೆಗಳೂ, ಸ್ಕಿಲ್ಸ್ (Skills) ಎಂದು. ಇಂದು ನಾವು ಯಾವ ವಿಷಯಗಳನ್ನು ಹೇಳುತ್ತೇವೋ ಅವೆಲ್ಲವೂ ಶಸ್ತ್ರ ವಿದ್ಯೆಯಲ್ಲಿಯೇ ಸೇರಿದ್ದವು. ಇನ್ನು ಸೈದ್ಧಾಂತಿಕ ವಿಷಯಗಳು, ಅಧ್ಯಾತ್ಮ ವಿಚಾರಗಳು ಇವುಗಳೆಲ್ಲವೂ ಶಾಸ್ತ್ರ ವಿದ್ಯೆ ಎಂದು ಕರೆಯಲ್ಪಡುತ್ತಿತ್ತು. 64 ವಿದ್ಯೆಗಳು, 14 ಅಥವಾ 18 ವಿದ್ಯಾಸ್ಥಾನಗಳು ಇತ್ಯಾದಿಯಾಗಿ ಭಾರತೀಯ ವಿದ್ಯೆಗಳನ್ನು ಕರೆಯುವ ಪದ್ಧತಿಯುಂಟು. ಛಾಂದೋಗ್ಯೋಪನಿಷತ್ತಿನಲ್ಲಿ ಸನತ್ಕುಮಾರ ಮತ್ತು ನಾರದರ ಸಂವಾದದಲ್ಲಿ ಅನೇಕ ವಿದ್ಯೆಗಳ ಉಲ್ಲೇಖವನ್ನು ನಾವು ನೋಡಬಹುದಾಗಿದೆ. ಮಾಂಡೋಕ್ಯೋಪನಿಷತ್ತಿನಲ್ಲಿ ವಿದ್ಯೆಯನ್ನು ಪರ ಮತ್ತು ಅಪರ ಎಂದೂ ವಿಭಾಗ ಮಾಡಿದ್ದಾರೆ. ಯಾವುದು ಐಹಿಕ ಮತ್ತು ಆಮುಷ್ಮಿಕ (ಇಹ–ಪರಗಳ) ಸುಖವನ್ನು ನೀಡುವುದೋ ಅದು ಅಪರ ವಿದ್ಯೆ. ಯಾವುದು ನಿತ್ಯ ಸುಖ (ಅರ್ಥಾತ್ ಮೋಕ್ಷ) ಸಾಧನವೋ ಅದು ಪರವಿದ್ಯೆ. ಇದನ್ನೇ ಉಪನಿಷತ್ತುಗಳು ಹೇಳುತ್ತವೆ "ಸಾ ವಿದ್ಯಾ ಯಾ ವಿಮುಕ್ತಯೇ" ಎಂಬುದಾಗಿ. ವಿದ್ಯೆಯ ಪ್ರಯೋಜನವೇ ಹೊರತು ವೃತ್ತಿ (ಉದ್ಯೋಗಪ್ರಾಪ್ತಿ) ಅಲ್ಲ. ನಾರದರು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳುವಂತೆ ಎಲ್ಲ ವಿದ್ಯೆಗಳನ್ನು ನಾನು ಅರಿತಿದ್ದರೂ 'ಸೋಹಂ ಭಗವಃ ಶೋಚಾಮಿ' ಅನಾತ್ಮವಿದೇವ ಅಹಮಸ್ಮಿ' ಎನ್ನುತ್ತಾರೆ. ಯಾವ ವಿದ್ಯೆಯು ನನ್ನನ್ನು ನಮಗೆ ತಿಳಿಸಿಕೊಡಲಾರದೋ ಅದರಿಂದ ದುಃಖನಿವೃತ್ತಿಯೋ, ಸುಖಪ್ರಾಪ್ತಿಯೋ ಆಗಲಾರದು. ಕೇವಲ ಬಾಹ್ಯ ವಸ್ತುಗಳ ಬಗೆಗೆ ಮಾಹಿತಿಯನ್ನು ನೀಡುವ ಯಾವ ವಿದ್ಯೆಯೂ ಪರಿಪೂರ್ಣವಲ್ಲ. ಏಕೆಂದರೆ ಬಾಹ್ಯವಸ್ತುಗಳು ಅನಂತ. ಎಷ್ಟೇ ವಿಷಯಗಳನ್ನು ತಿಳಿದಿದ್ದರೂ ಪುನಃ ಅರಿಯಬೇಕಾದ ವಿಷಯಗಳು ಅವಶ್ಯವಾಗಿ ಇದ್ದೇ ಇರುತ್ತದೆ. ಬಾಹ್ಯ ಪದಾರ್ಥಗಳನ್ನು ಅರಿತು ಮುಗಿಸಲು ಸಾಧ್ಯವೇ ಇಲ್ಲ. ಆದರೂ ಬಹು ತಿಳಿದವರನ್ನು ಸರ್ವಜ್ಞರೆನ್ನುವಂತೆ ಗೌರವಿಸುತ್ತೇವೆ. ಯಾವುದನ್ನು ತಿಳಿಯದಿದ್ದರೆ ಯಾವ ವಿದ್ಯೆಯೂ ಪೂರ್ಣವಾಗಲಾರದೋ ಅಥವಾ ಯಾವುದನ್ನು ಅರಿತರೆ ಪುನಃ ಅರಿಯಬೇಕಾದ ವಿಷಯಗಳು ಉಳಿಯುವುದಿಲ್ಲವೋ ಅದೇ ನಾನು. ಈ ವಿಷಯಕ್ಕೆ ಅರ್ಥಾತ್ ನನ್ನನ್ನು ನಾನು ಅರಿಯುವುದರಿಂದಲೇ ಎಲ್ಲ ವಿದ್ಯೆಗಳೂ ಪರಿಪೂರ್ಣವಾಗುವುದು ಎಂಬುದು ಇಂದಿನ ಯಾವ ವಿದ್ಯಾಶಾಖೆಗಳಲ್ಲೂ ನೋಡಲು ಸಾಧ್ಯವಿಲ್ಲ. ವಿಜ್ಞಾನಾದಿ ಯಾವ ವಿಷಯಗಳಲ್ಲಿಯೂ ಇದರ ಉಲ್ಲೇಖವೇ ಕಾಣಸಿಗದು. ಈ ವಿಷಯದ ಸ್ಪರ್ಶವಾಗದ ಕಾರಣದಿಂದಲೇ ಹೆಚ್ಚು ಓದಿದವರೇ ಕೆಲವೊಮ್ಮೆ ಅತಿ ದುಃಖಿಗಳಾಗಿರುತ್ತಾರೆ. ಶಾಲೆಗಳಲ್ಲಿ ನೀಡುವ ನೈತಿಕ ಶಿಕ್ಷಣವು ಈ ಸಿದ್ಧಾಂತಕ್ಕೆ ಕೆಲವೊಮ್ಮೆ ಹತ್ತಿರವಾಗಿರುತ್ತದೆ. ಆತ್ಮವಿದ್ಯೆಯೇ ಪರಮ ವಿದ್ಯೆ ಎಂದು. ವಿದ್ಯೆಗೆ ಶಿಕ್ಷಣ ಎಂಬುದು ಮಾಧ್ಯಮ.

ಪರಾಪರ ಎಲ್ಲ ವಿದ್ಯೆಗಳಲ್ಲಿಯೂ ಸಮಾನವಾದ ಒಂದಂಶವೆಂದರೆ ಗುರುಕುಲ ಪದ್ಧತಿ ಅಥವಾ ಕುಲಪದ್ಧತಿ. ನಮ್ಮಲ್ಲಿ ಕುಲದಿಂದ ಬಂದದ್ದಾಗಲಿ ಅಥವಾ ಸ್ವಭಾವತಃ ಬಂದ ವಿದ್ಯೆಯಾಗಲೀ ಯಾವುದೂ ಕೀಳಲ್ಲ. ಬದಲಾಗಿ ಅದೊಂದು ದೇವತಾ ಕೈಂಕರ್ಯ, ವೇದಾಧ್ಯಯನವನ್ನು ಮಾಡಿ ಧಾರ್ಮಿಕಾನುಷ್ಠಾನವನ್ನು ಮಾಡಿಸುವವನಿಗೆ ತನ್ನ ವಿದ್ಯೆಯ ಬಗೆಗೆ ಯಾವ ಗೌರವವಿತ್ತೋ, ಅದೇ ಗೌರವ, ಶ್ರದ್ಧೆ ಕ್ಷೌರಿಕನಿಗೂ ತನ್ನ ವೃತ್ತಿಯ ಬಗೆಗೆ ಇರುತ್ತಿತ್ತು. ನಮ್ಮ ದೃಷ್ಟಿಯಿಂದ ಯಾವ ವಿದ್ಯೆ ಅಥವಾ ವೃತ್ತಿಯೂ ಮೇಲಲ್ಲ, ಯಾವ ವಿದ್ಯೆ ಅಥವಾ ವೃತ್ತಿಯೂ ಕೀಳಲ್ಲ.

## ಶಿಕ್ಷಣದ ದುಃಸ್ಥಿತಿಗೆ ಕಾರಣಗಳು

ಇದು ಪ್ರಾಚೀನ ಸ್ಥಿತಿಯಾದರೆ ಇಂದು ಯಾಕೆ ಈ ದುರ್ಗತಿ ಎಂದರೆ

ಪುಟ 10 ಕ್ಕೆ ➤

ಬಹುರತ್ನಾ ವಸುಂಧರಾ

# ರಾಜಕುಮಾರಿ ಅಮೃತಾ ಕೌರ್

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಮಹಿಳೆಯರ ಸ್ಥಿತಿಯನ್ನು ಸುಧಾರಿಸುವುದನ್ನೇ ತಮ್ಮ ಜೀವನದ ಧ್ಯೇಯವನ್ನಾಗಿ ಇಟ್ಟುಕೊಂಡು ಅದಕ್ಕಾಗಿ ಹಲವಾರು ಯೋಜನೆಗಳನ್ನು ಕೈಗೊಂಡು ಯಶಸ್ವಿಯಾಗಿ ಕಾರ್ಯಗತಗೊಳಿಸಿದ ಧೀಮಂತ ಹೆಣ್ಣುಮಗಳು ಅಮೃತಾ ಕೌರ್. ಅರಸು ಮನೆತನದ ವೈಭವೋಪೇತ ಸುಖಸೌಲಭ್ಯಗಳ ಆಕರ್ಷಣೆಗೆ ಒಳಗಾಗದೇ ಸಾಮಾನ್ಯ ಜನರಿಗಾಗಿ, ಸಾಮಾನ್ಯರಂತೆಯೇ ಬದುಕುತ್ತ ಅವರ ಸಮಸ್ಯೆಗಳನ್ನು ದೂರ ಮಾಡಲು ಶ್ರಮಿಸಿದವರು ಅಮೃತ ಕೌರ್.

ಅಮೃತಾ ಕೌರ್ ಪಂಜಾಬಿನ ಜಲಂಧರ್ ವಿಭಾಗದ ಕಪುರ್ತಲಾ ಸಂಸ್ಥಾನದ ಪ್ರಸಿದ್ಧ ಅಹ್ಲುವಾಲಿಯಾ ರಾಜಮನೆತನದವರು. ಈಕೆಯ ತಂದ ರಾಜಾ ಹರ್ ನಾಮ ಸಿಂಗ್ ಕಪುರ್ತಲಾ ಸಂಸ್ಥಾನವನ್ನು ಆಳಿದವರಲ್ಲಿ ಒಬ್ಬರು. ಅಮೃತಾ ಕೌರ್ ಲಖನೌದಲ್ಲಿ 1889 ರ ಫೆಬ್ರವರಿ 2 ರಂದು ಜನಿಸಿದರು. ಇವರ ಶಾಲಾ–ಕಾಲೇಜು ವಿದ್ಯಾಭ್ಯಾಸಗಳು ಲಖನೌದಲ್ಲಿಯೇ ನಡೆಯಿತು. ವ್ಯಾಯಾಮ, ಕ್ರೀಡೆಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದು ಅಮೃತಾ ಕೌರ್ ಉತ್ತಮ ಟೆನಿಸ್ ಆಟಗಾರ್ತಿಯಾಗಿದ್ದರು.

ಜನಪರ ಕಾಳಜಿ ಹೊಂದಿದ್ದ ಅಮೃತಾ ಕೌರ್ ಮಹಿಳೆಯರಿಗೆ ಆ ಕಾಲದಲ್ಲಿ ವಿಧಿಸಲಾಗುತ್ತಿದ್ದ ಕಟ್ಟುಪಾಡುಗಳನ್ನು ಗಮನಿಸುತ್ತಿದ್ದರು. ಅವರ ಸಮಸ್ಯೆಗಳ ಬಗ್ಗೆ ತಿಳಿಯಲು ಪ್ರಯತ್ನಿಸುತ್ತಿದ್ದರು. ಅವರ ವ್ಯಕ್ತಿತ್ವ ವಿಕಾಸಕ್ಕೆ ಧಕ್ಕೆ ತರುತ್ತಿದ್ದ ಬಾಲ್ಯ ವಿವಾಹ, ಪರದಾ ಪದ್ಧತಿ, ಅನಕ್ಷರತೆ, ವರದಕ್ಷಿಣೆಯ ಪಿಡುಗು ಇವನ್ನೆಲ್ಲ ಹೋಗಲಾಡಿಸದೇ ಅವರ ಸ್ಥಿತಿ ಮುಂದುವರಿಯುವುದು ಅಸಾಧ್ಯವೆಂಬ ಅಂಶವನ್ನು ಅರಿತರು. ಸಮಾಜದಲ್ಲಿ ಅವರು ಒಂದು ಗೌರವಾನ್ವಿತ ಸ್ಥಾನಮಾನವನ್ನು ಹೊಂದುವುದು ಅವಶ್ಯಕವೆಂಬುದು ಅವರ ವಿಚಾರವಾಗಿತ್ತು. ಹಿಂದೂ ಕುಟುಂಬಗಳಲ್ಲಿನ ವಿಧವೆಯರ ಸ್ಥಿತಿ,ಅದರಲ್ಲಿಯೂ ಬಾಲವಿಧವೆಯರ ಸ್ಥಿತಿ, ಮದುವೆಗಳ ದುಂದುವೆಚ್ಚ, ಸ್ತ್ರೀಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕುಗಳಿಗೆ ಸಂಬಂಧಿಸಿದಂತೆ ಕಾನೂನುಗಳಲ್ಲಿ ಮೂಲಭೂತ ಬದಲಾವಣೆಯ ಅವಶ್ಯಕತೆ ಮುಂತಾದ ಹತ್ತಾರು ವಿಷಯಗಳನ್ನು ಕುರಿತು ಅವರ ಚಿಂತನೆ ನಡೆದಿತ್ತು. ಫಲವಾಗಿ ವಿಧವಾ ವಿವಾಹ, ಕಡ್ಡಾಯ ಮಹಿಳಾ ಶಿಕ್ಷಣದ ಜಾರಿ, ಬಾಲ್ಯ ವಿವಾಹಗಳಿಗೆ ತಡೆ ಮುಂತಾದ ಬದಲಾವಣೆಗಳನ್ನು ತರಬೇಕೆಂಬುದು ಅವರ ಅಭಿಪ್ರಾಯವಾಗಿತ್ತು.

ಗಾಂಧೀಜಿಯವರ ವಿಚಾರಗಳಲ್ಲಿ ಅಪಾರ ನಂಬಿಕೆಯಿಟ್ಟುಕೊಂಡಿದ್ದ ಅಮೃತಾ ಕೌರ್ ಹರಿಜನೋದ್ಧಾರ ಮತ್ತು ಅಹಿಂಸಾ ತತ್ತ್ವಗಳಲ್ಲಿ ಅಚಲ ವಿಶ್ವಾಸ ಹೊಂದಿದ್ದರು. ಗಾಂಧೀಜಿಯವರ ತತ್ತ್ವಗಳನ್ನು ಶ್ರದ್ಧೆಯಿಂದ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು.ಅಷ್ಟೇ ಅಲ್ಲ, ದೇಶದ ಜನತೆಗೂ ಹಾಗೆ ಮಾಡುವಂತೆ ಕರೆ ನೀಡಿದರು. ಗಾಂಧೀಜಿಯವರ ನಿಕಟವರ್ತಿಗಳಲ್ಲಿ ಒಬ್ಬರಾಗಿದ್ದು, 16 ವರ್ಷಗಳ ಕಾಲ ಅವರ ಕಾರ್ಯದರ್ಶಿಯ ಸ್ಥಾನವನ್ನು ವಹಿಸಿಕೊಂಡು ತಮ್ಮ ಜವಾಬ್ದಾರಿಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದರು. ಸ್ವಾತಂತ್ರ್ಯ ಚಳುವಳಿಗಳಲ್ಲಿ ಭಾಗವಹಿಸಿ ಹಲವು ಬಾರಿ ಬಂಧನಕ್ಕೆ ಒಳಗಾಗಿ ಸೆರೆವಾಸವನ್ನೂ ಅನುಭವಿಸಿದರು. ಉಪ್ಪಿನ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ಪಾಲ್ಗೊಂಡು ಬಂಧಿತರಾದರು. ಅಹಿಂಸಾತ್ಮಕವಾಗಿ ಅವರು ನಡೆಸಿದ್ದ ಹೋರಾಟವನ್ನು ಗಾಂಧೀಜಿಯವರು ಮೆಚ್ಚಿ ಪ್ರಶಂಸಿಸಿದ್ದರು.

1930 ರಲ್ಲಿ ಅಮೃತಾ ಕೌರ್ ಅಖಿಲ ಭಾರತ ಮಹಿಳಾ ಸಮ್ಮೇಳನದ ಕಾರ್ಯದರ್ಶಿಯಾಗಿ ಶ್ರಮಿಸಿದ್ದರು. ಮಹಿಳಾಸಂಘದ ಅಧ್ಯಕ್ಷರಾಗಿ ಮೂರು ವರ್ಷಗಳ ಕಾಲ ಯಶಸ್ವಿಯಾಗಿ ಸೇವೆ ಸಲ್ಲಿಸಿದರು. ಮೂಲ ಶಿಕ್ಷಣವನ್ನು ಕುರಿತ ಸಂಘವೊಂದರ ಸದಸ್ಯೆಯಾಗಿ ಮಹಿಳೆಯರ ಹಲವಾರು ಮೂಲಭೂತ ಸಮಸ್ಯೆಗಳನ್ನು ನಿವಾರಿಸಲು ಪ್ರಯತ್ನಿಸಿದರು. ಯುನೆಸ್ಕೋ ಸಮ್ಮೇಳನದಲ್ಲಿ ಭಾರತೀಯ ಪ್ರತಿನಿಧಿಯಾಗಿ ಎರಡು ಬಾರಿ ಭಾಗವಹಿಸಿ, ಭಾರತೀಯ ಮಹಿಳೆಯರ ಕುರಿತು,ಭಾರತೀಯ ಜೀವನಶೈಲಿಯ ಕುರಿತು, ಭಾರತೀಯರು ಎದುರಿಸುತ್ತಿರುವ ಹಲವು ಸಮಸ್ಯೆಗಳ ಕುರಿತು ಅಂಕಿ–ಅಂಶಗಳ ಸಮೇತ ಭಾಷಣ ಮಾಡಿದ್ದರು. ಜಾಗತಿಕ ವೇದಿಕೆಯಲ್ಲಿ ಮಾಡಿದ್ದ ಆ ಪ್ರಭಾವಶಾಲಿಯೂ, ಪರಿಣಾಮಕಾರಿಯೂ ಆದ ಭಾಷಣದ ಮೂಲಕ ಜಗತ್ತಿನ, ವಿಶೇಷವಾಗಿ ಪಾಶ್ಚಾತ್ಯ ದೇಶಗಳು ಭಾರತದತ್ತ ಕಣ್ತೆರೆದು ನೋಡುವಂತೆ ಮಾಡಿದ್ದರು. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಅವರು ಮೊಟ್ಟ ಮೊದಲ ಆರೋಗ್ಯ ಸಚಿವೆಯಾಗಿ ಕೇಂದ್ರ ಸರಕಾರದ ಸಚಿವ ಸಂಪುಟದಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿ ಜನರ ಆರೋಗ್ಯ ಸಮಸ್ಯೆಗಳ ನಿವಾರಣೆಗೆ ಪ್ರಯತ್ನಿಸಿದ್ದರು. ಆ ಸಮಯದಲ್ಲಿಯೇ ನವ ದೆಹಲಿಯ ಎಐಎಂಎಸ್ (All India Institute Of Medical Sciences) ನ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅದಕ್ಕಾಗಿ ಆರ್ಥಿಕ ನೆರವನ್ನು ಹೊಂದಿಸಲು ನ್ಯೂಜಿಲೆಂಡ್ ಆಸ್ಟ್ರೇಲಿಯ, ವೆಸ್ಟ್ ಜರ್ಮನಿ, ಸ್ವೀಡನ್ ಮತ್ತು ಯುನೈಟೆಡ್ ಸ್ಟೇಟ್ಸ್ ಗಳನ್ನು ಸಂಪರ್ಕಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕ್ಷಯರೋಗವನ್ನು ನಿರ್ಮೂಲಗೊಳಿಸುವಲ್ಲಿ, ಮಲೇರಿಯಾ ಪಿಡುಗಿನಿಂದ ದೇಶವನ್ನು ಮುಕ್ತಗೊಳಿಸುವಲ್ಲಿ ಇವರ ಪಾತ್ರ ಹಿರಿದಾದುದು. ಅಷ್ಟೇ ಅಲ್ಲ, ಜಾಗತಿಕ ನೆಲೆಯಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ನಡೆದ ಬಿ.ಸಿ.ಜಿ. ವ್ಯಾಕ್ಸಿನೇಷನ್ ಕಾರ್ಯಕ್ರಮದ ಹಿಂದಿನ ಪ್ರಭಾವೀಶಕ್ತಿಯಾಗಿದ್ದರು.

ಅಮೃತಾ ಕೌರ್ ಸ್ವತಃ ಕ್ರೀಡಾಪಟುವಾಗಿದ್ದು, ಕ್ರೀಡಾಪಟುಗಳಿಗೆ ತರಬೇತಿ ಕೊಡುವ ವಿಶೇಷ ವ್ಯವಸ್ಥೆಯೊಂದನ್ನು ರೂಪಿಸುವ ಮೂಲಕ ಕ್ರೀಡಾಕ್ಷೇತ್ರದ ಮೇಲೂ ತಮ್ಮ ಪ್ರಭಾವವನ್ನು ಅಚ್ಚಳಿಯದಂತೆ ಮೂಡಿಸಿದ್ದರು. ಅವರು ಭಾರತದ ಸಂವಿಧಾನ ರಚನೆಯ ಸಮಿತಿಯ ಸದಸ್ಯರೂ ಆಗಿದ್ದರು.

ಅಮೃತಾ ಕೌರ್ ಮಕ್ಕಳ ಕಲ್ಯಾಣ ಸಮಿತಿಯ ರಚನೆಯಲ್ಲಿ ಸಹ ಮುಖ್ಯವ್ಯಕ್ತಿಯಾಗಿದ್ದರು. ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಅಧ್ಯಕ್ಷರಾಗಿ 14 ವರ್ಷಗಳು ಕಾರ್ಯ ನಿರ್ವಹಿಸಿ, ಆ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಪಪ್ರಥಮ ಯೋಜನೆಗಳನ್ನು ಕೈಗೊಳ್ಳುವಲ್ಲಿ ಮಾರ್ಗದರ್ಶನ ಮಾಡಿದ್ದರು. ಸಮಾಜಸೇವೆಯ ಹಲವು ಯೋಜನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಅಮೃತಾ ಕೌರ್ 1964 ರಲ್ಲಿ ನಿಧನರಾದರು. ●

# ಶಿಕ್ಷಕರ ಆದರ್ಶ



ಸಂಗ್ರಹಕಾರರು:
**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ಸಾಮಾನ್ಯವಾಗಿ 10 ರಿಂದ 15 ವರ್ಷ ವಯಸ್ಸಿನವರೆಗೂ ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರನ್ನು ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆ. ಏಕೆಂದರೆ ಆ ವಯಸ್ಸು ಮೇಣದಂತ ಹೃದಯವನ್ನು ಹೊಂದಿರುವ ವಯಸ್ಸು. ಅಧ್ಯಾಪಕರ ಒಳಿತು–ಕೆಡಕುಗಳ ಸಂಸ್ಕಾರ ಅವರ ವ್ಯಕ್ತಿತ್ವದ ಮೇಲೆ ಗಾಢವಾದ ಪ್ರಭಾವವನ್ನು ಬೀರುತ್ತದೆ. ಎಷ್ಟೇ ವಯಸ್ಸಾದರೂ ಆ ಅಧ್ಯಾಪಕರನ್ನು–ಯಾರು ತಮ್ಮ ಮೇಲೆ ಪ್ರಭಾವ ಬೀರಿರುತ್ತಾರೋ ಅವರನ್ನು ಮರೆಯುವಂತೆಯೇ ಇಲ್ಲ. ಸಹಪಾಠಿಗಳು ಕಲೆತಾಗ ತಮ್ಮ ಶಿಕ್ಷಕರ ಬಗ್ಗೆ ಚರ್ಚಿಸುತ್ತಾರೆ. ಅಕಸ್ಮಾತ್ ಶಿಕ್ಷಕರು ಭೇಟಿಯಾದಾಗ ಪಾದಮುಟ್ಟಿ ವಂದಿಸುತ್ತಾರೆ. ಕೆಲವೊಮ್ಮೆ ಅವರನ್ನು ಭೇಟಿ ಮಾಡಲು ಅವರ ಮನೆಗೆ ಹೋಗುವುದೂ ಉಂಟು. ಇನ್ನು ಕಾಲೇಜು ಅಧ್ಯಾಪಕರ ವಿಷಯಕ್ಕೆ ಬಂದರೆ ಅಲ್ಲೂ ತಮಗೆ ಪ್ರೀತಿ ವಾತ್ಸಲ್ಯಗಳನ್ನು ತೋರಿದ, ತಮ್ಮ ಬಾಳಿಗೆ ಪ್ರೇರಣೆ ನೀಡಿದ ಶಿಕ್ಷಕರನ್ನು ಮರೆಯುವುದೇ ಇಲ್ಲ.

ಈ ಮಾತಿಗೆ ಹಿಂದಿನ ತಲೆಮಾರಿನ ಮೂವರು ಶಿಕ್ಷಕರ ಉದಾಹರಣೆ ಕೊಡುತ್ತೇನೆ.

- ಉದಾ 1: 1940 ರಿಂದ 1973ರವರೆಗೆ 33 ವರ್ಷ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖರಾಗಿದ್ದ ಮಾಧವ ಸದಾಶಿವರಾವ್ ಗೋಲ್ವಾಲ್ಕರ್‌ರವರು 1930ರಿಂದ 1933ರವರೆಗೆ ಮೂರು ವರ್ಷಗಳ ಕಾಲ ತಾವು ಜೀವಶಾಸ್ತ್ರದಲ್ಲಿ ಎಂ.ಎಸ್ಸಿ ಪದವಿ ಪಡೆದಿದ್ದು ಕಾಶೀ ಹಿಂದೂ ವಿಶ್ವವಿದ್ಯಾಲಯದಲ್ಲಿ ಜೀವಶಾಸ್ತ್ರ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ಆ ಸಮಯದಲ್ಲಿ ಅವರು ವಿದ್ಯಾರ್ಥಿಗಳಿಗೆ ಅತ್ಯಂತ ಪ್ರೀತಿ ಪಾತ್ರರಾದ ಶಿಕ್ಷಕರಾಗಿದ್ದರು. ಬೇರೆ ಬೇರೆ ವಿಷಯಗಳ ವಿದ್ಯಾರ್ಥಿಗಳೂ ಅವರಿಂದ ತಮ್ಮ ಸಮಸ್ಯಾ ಪರಿಹಾರಕ್ಕಾಗಿ ಬರುತ್ತಿದ್ದರು. ತಮ್ಮದಲ್ಲದ ವಿಷಯವಾದರೂ ರಾತ್ರಿಯ ವೇಳೆ ಆ ವಿಷಯವನ್ನು ಅಧ್ಯಯನ ಮಾಡಿ ವಿದ್ಯಾರ್ಥಿಗಳ ಸಮಸ್ಯೆಗೆ ಪರಿಹಾರ ಸೂಚಿಸುತ್ತಿದ್ದರು. ಹೀಗಾಗಿ ವಿದ್ಯಾರ್ಥಿಗಳು ಅವರನ್ನು 'ಗುರೂಜಿ' ಎಂದೇ ಕರೆಯುತ್ತಿದ್ದರು. 'ಗುರೂಜಿ' ಎಂಬ ಅಭಿದಾನವೇ ಅವರಿಗೆ ಶಾಶ್ವತವಾಗಿ ಉಳಿಯಿತು. ನಂತರದ ದಿನಗಳಲ್ಲಿ ಅವರು ಗುರೂಜಿ ಗೋಲ್ವಾಲ್ಕರ್ ಎಂದೇ ಪ್ರಸಿದ್ಧರಾದರು.

- ಉದಾ2– ಮೈಸೂರು ವಿಶ್ವ ವಿದ್ಯಾಲಯದ ಮೊತ್ತ ಮೊದಲ ಕನ್ನಡದ ಪ್ರೊಫೆಸರ್‌ಆಗಿ ನಿಯುಕ್ತಗೊಂಡ ಟಿ.ಎಸ್ ವೆಂಕಣ್ಣಯ್ಯನವರು ನೂರಾರು ವಿದ್ಯಾರ್ಥಿಗಳಿಗೆ ಪ್ರಿಯ ಶಿಕ್ಷಕರಾಗಿಯೂ, ಪ್ರೇರಕರಾಗಿಯೂ ಇದ್ದವರು. ಕನ್ನಡದ ಮೊತ್ತ ಮೊದಲ 'ಜ್ಞಾನ ಪೀಠ' ಪ್ರಶಸ್ತಿ ವಿಜೇತ ಕುವೆಂಪುರವರು ತಮ್ಮ ಪದವಿ ಪರೀಕ್ಷೆಗೆ ಫಿಲಾಸಫಿಯನ್ನು ಓದಲು ಹೆಸರು ನೋಂದಾಯಿಸಿಕೊಳ್ಳಲು ಹೊರಟಾಗ ಅವರಿಗೆ ಕನ್ನಡ ಓದಲು ಪ್ರೇರೇಪಿಸಿ, ನಂತರ ಅವರ ವಿದ್ಯಾರ್ಥಿಯಾದ ಅವರನ್ನು ತಿದ್ದಿ ತೀಡಿ ಕವಿಯನ್ನಾಗಿ ರೂಪಿಸಿದವರು ವೆಂಕಣ್ಣಯ್ಯನವರೇ! ಕುವೆಂಪುರವರಿಗೆ ತಮ್ಮ ಗುರುಗಳ ಮೇಲೆ ಎಷ್ಟು ಶ್ರದ್ಧಾ ಭಕ್ತಿ ಇತ್ತೆಂದರೆ ತಮ್ಮ ಬೃಹತ್ ಕಾವ್ಯವಾದ 'ರಾಮಾಯಣದರ್ಶನಂ' ಅನ್ನು ವೆಂಕಣ್ಣಯ್ಯನವರಿಗೇ ಸಮರ್ಪಿಸಿದ್ದರು. ಇಷ್ಟೇ ಅಲ್ಲ ಇನ್ನೂ ಅನೇಕರು ಅವರ ಮನೆಯಲ್ಲಿ ವಾರಾನ್ನಕ್ಕಾಗಿ ಹೋಗುತ್ತಿದ್ದರು. ಅವರಿಂದ ಕಾಲೇಜು ಫೀಸು ಪಡೆದು ವಿದ್ಯಾಭ್ಯಾಸ ಮುಗಿಸಿದವರ ಸಂಖ್ಯೆಯೂ ಕಡಿಮೆ ಏನಿಲ್ಲ. ತಾವು ಬಡತನದ ಜೀವನ ನಡೆಸಿದರೂ ಅವರ ಶಿಷ್ಯ ವಾತ್ಸಲ್ಯಕ್ಕೆ ಬಡತನವಿರಲಿಲ್ಲ.

- ಉದಾ 3– ಟಿ.ಎಸ್. ವೆಂಕಣ್ಣಯ್ಯನವರ ತಮ್ಮನಾದ ತ.ಸು ಶ್ಯಾಮರಾಯರೂ ಅಣ್ಣನವರ ಹಾದಿಯನ್ನು ತುಳಿದು ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದವರು. ಸ್ವತಃ ಬಡತನದ ಬವಣೆಯಲ್ಲಿ ಬೆಂದಿದ್ದ ಶ್ಯಾಮರಾಯರಿಗೆ ಬಡ ವಿದ್ಯಾರ್ಥಿಗಳ ಬಗ್ಗೆ ಅಪಾರ ಅನುಕಂಪ. ವಾರಾನ್ನದ ಹುಡುಗರು ವರ್ಷಪೂರ್ತಿ ಮನೆಮಕ್ಕಳ ಹಾಗೆಯೇ ಅವರ ಮನೆಯಲ್ಲಿ ಇರುತ್ತಿದ್ದರು. ಶಿಷ್ಯರು ಯಾವ ವಯಸ್ಸಿನವರಾದರೂ ಅವರ ಪಾಲಿಗೆ ಅವರೆಲ್ಲಾ 'ಮಗು'ವೇ. ಎಲ್ಲರನ್ನೂ ಅವರು 'ಮಗು' ಎಂದೇ ಕರೆಯುತ್ತಿದ್ದುದು. ಅವರೊಬ್ಬ ಆದರ್ಶ ಅಧ್ಯಾಪಕರಾಗಿದ್ದರು. "ಅಧ್ಯಾಪಕರ ಕೆಲಸವೆಂದರೆ ವಿಸ್ತಾರವಾದ ಓದು ಮತ್ತು ವ್ಯಾಪಕವಾದ ಬರವಣಿಗೆ" ಎಂಬುದು ಅವರ ದೃಢ ನಂಬಿಕೆ.

ಅವರ ಶಿಷ್ಯ ವೃಂದದಲ್ಲಿ ಇದ್ದ ಕೆಲವರು ಕನ್ನಡದ ಖ್ಯಾತ ಕವಿಗಳಾಗಿ ಸಾಹಿತಿಗಳಾಗಿ ಹೆಸರು ಮಾಡಿದ್ದಾರೆ. ರಾಷ್ಟ್ರಕವಿ ಎಂದು ಬಿರುದಾಂಕಿತರಾದ ಜಿ.ಎಸ್.ಶಿವರುದ್ರಪ್ಪ, ನೈಶಿಲಭಟ್ಟ ಎಂಬ ಕಾವ್ಯನಾಮದ ಎನ್.ಎಸ್ ಲಕ್ಷ್ಮೀ ನಾರಾಯಣ ಭಟ್ಟ, ಪ್ರಸಾರಾಂಗದ ನಿರ್ದೇಶಕರಾಗಿದ್ದ ಡಾ|| ಪ್ರಭುಶಂಕರ ಮೊದಲಾದ ಅನೇಕ ಸಾಹಿತಿಗಳು, ಮುಖ್ಯಮಂತ್ರಿಗಳಾಗಿದ್ದ ಬಂಗಾರಪ್ಪ, "ನೀರ್‌ಸಾಬ್ರು" ಎಂದೇ ಖ್ಯಾತರಾಗಿದ್ದ ನಜೀರ್‌ಸಾಬ್ ಮೊದಲಾದವರೆಲ್ಲ ಅವರ ವಿದ್ಯಾರ್ಥಿಗಳಾಗಿದ್ದು ಉಪಕೃತರಾದರವೇ.

**ಉಪಸಂಹಾರ:**

ಯಾವ ವಿದ್ಯಾರ್ಥಿಯ ಮನಸ್ಸಿನಲ್ಲೂ ಶಿಕ್ಷಕರು ಪಾಠ ಮಾಡಿದ ವಿಷಯ ಉಳಿಯುವುದಿಲ್ಲ. ಆದರೆ ಅವರು ತೋರಿದ ಪ್ರೀತಿ, ವಾತ್ಸಲ್ಯ, ಕಲಿಸುವಾಗಿನ ಕಾಳಜಿ, ತರಗತಿಯ ಒಳಗೆ ಹಾಗೂ ಹೊರಗೆ ಅವರ ವ್ಯವಹಾರ, ಅವರ ಜೀವನಾದರ್ಶಗಳು ವಿದ್ಯಾರ್ಥಿಯ ಜೀವನದ ಮೇಲೆ ಬಹಳಷ್ಟು ಪ್ರಭಾವವನ್ನು ಬೀರುತ್ತವೆ. ಹೀಗಾಗಿಯೇ ಮೇಲಿನ ಮೂರು ಜನ, ಇವರಂತೆ ಬದುಕಿಬಾಳಿದ ಅನೇಕ ಕಾಲೇಜು ಶಿಕ್ಷಕರು ಜನಮಾನಸದಲ್ಲಿ ಶಾಶ್ವತವಾಗಿ ನೆಲಸಿದ್ದಾರೆ. ನಾವೂ ಸಹ ಅವರಂತಾಗುವ ದಿಕ್ಕಿನಲ್ಲಿ ನಾಲ್ಕು ಹೆಜ್ಜೆ ಹಾಕುವ ಸಂಕಲ್ಪ ಮಾಡಬಹುದಲ್ಲವೇ?

●

# ಎಲ್ಲ ಸಂಘಟನೆಗಳಿಗೂ ಎಲ್ಲಾ ಕಾಲಕ್ಕೂ ಸಲ್ಲುವ ಸ್ವಾಮಿ ವಿವೇಕಾನಂದರು ಹೇಳಿದ ಸಂಘಟನಾ ಸೂತ್ರಗಳು

ಒಮ್ಮೆ ಸ್ವಾಮೀಜಿ ನನ್ನ ಅಜ್ಜಿಗೆ, 'ನನ್ನ ಆಯುಷ್ಯದಲ್ಲಿನ ಅತ್ಯಂತ ದೊಡ್ಡ ಪ್ರಲೋಭನೆಯನ್ನು ಅಮೆರಿಕೆಯಲ್ಲಿ ಕಂಡೆ'. ಎಂದು ಹೇಳಿದರು. ನಮ್ಮ ಅಜ್ಜಿಯು ಚೇಷ್ಟೆಗೆಂದು ಅವರಿಗೆ, 'ಅವಳು ಯಾರು ಸ್ವಾಮೀಜಿ?' ಎಂದು ಕೇಳಿದಳು. ಆಗ ಸ್ವಾಮೀಜಿ ಗೊಳ್ಳನೆ ನಗುತ್ತಾ 'ಛೇ, ಅದು ಸ್ತ್ರೀ ಅಲ್ಲ ಸಂಘಟನೆ' ಎಂದರು. ಹೀಗೆ ಸ್ವಾಮೀಜಿ ಅಮೆರಿಕೆಯಲ್ಲಿ, ಸಂಘಟಿತ ಪ್ರಯತ್ನದಿಂದ ಎಷ್ಟೊಂದು ಕಾರ್ಯಸಾಧನೆ ಆಗುತ್ತದೆಂಬುದನ್ನು ಕಂಡುಕೊಂಡರು.

–ಕುಮಾರಿ ಕಾರ್ನರ್‌ರವರ ಬರಹದಿಂದ

- ದೇಶ ವಿದೇಶಗಳಲ್ಲಿನ ನನ್ನ ಸಂಚಾರದ ನಂತರ ಸಂಘಟನೆ ಇಲ್ಲದೆ ಯಾವುದೇ ಹಿರಿದಾದ ಶಾಶ್ವತ ಕಾರ್ಯವನ್ನು ಮಾಡಲಾಗುವುದಿಲ್ಲ ಎಂಬ ನಿಷ್ಕರ್ಶೆಗೆ ನಾನು ಬಂದಿದ್ದೇನೆ.
- ಮಾನವ ಜನಾಂಗದ ಕಲ್ಯಾಣಕ್ಕಾಗಿ ಹೊರಟವರು ತಮ್ಮ ಸುಖ–ದುಃಖಗಳು, ಹೆಸರು ಕೀರ್ತಿಗಳು, ಸರ್ವ ಹಿತಸಂಬಂಧಗಳು–ಇವೆಲ್ಲವನ್ನೂ ಮೂಟೆ ಕಟ್ಟಿ ಸಮುದ್ರಕ್ಕೆ ಎಸೆಯಬೇಕು. ಆನಂತರ ಪ್ರಭುಚರಣದ ಬಳಿ ಬರಬೇಕು. ಎಲ್ಲ ಮಹಾ ಪುರುಷರೂ ಹೇಳಿರುವುದೂ ಇದನ್ನೇ, ಮಾಡಿರುವುದೂ ಇದನ್ನೇ.
- ಆಜ್ಞೆಯನ್ನು ಪಾಲಿಸಬಲ್ಲವನೇ ಆಜ್ಞೆಯನ್ನು ಕೊಡಲೂ ಬಲ್ಲ. ಮೊದಲು ವಿಧೇಯತೆ ಕಲಿಯಿರಿ. ಪಾಶ್ಚಾತ್ಯ ದೇಶಗಳಲ್ಲಿ ಸ್ವಾತಂತ್ರದ ಭಾವನೆ ಅಷ್ಟು ಪ್ರಖರವಾಗಿದ್ದರೂ ವಿಧೇಯತೆಯ ವೃತ್ತಿಯೂ ಅಷ್ಟೇ ಬಲವಾಗಿದೆ. ನಮ್ಮಲ್ಲಾದರೋ ಸ್ವಪ್ರತಿಷ್ಟೆ ಹೆಚ್ಚು. ಅದರಿಂದಾಗಿ ಯಾವ ಕೆಲಸವೂ ನಮ್ಮಿಂದ ಆಗುತ್ತಿಲ್ಲ. ಮಹತ್ತರ ಉದ್ಯಮ, ಅಸೀಮ ಸಾಹಸ, ಪ್ರಚಂಡ ಕಾರ್ಯಶಕ್ತಿ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಪರಿಪೂರ್ಣ ವಿಧೇಯತೆ– ಇವುಗಳ ಸಂಯೋಗದಿಂದಲೇ ವ್ಯಕ್ತಿಯ ಹಾಗೂ ರಾಷ್ಟ್ರದ ಪುನರುತ್ಥಾನವಾದೀತು.
- ಒಂದು ವೇಳೆ ನನ್ನ ಗುರುಬಂಧುಗಳು ನನಗೆ ನನ್ನ ಉಳಿದ ಆಯುಷ್ಯವನ್ನೆಲ್ಲ ಮಠದ ಚರಂಡಿಯನ್ನು ತೊಳೆಯುತ್ತಾ ಕಳೆಯಬೇಕೆಂದು ಆಜ್ಞಾಪಿಸಿದಲ್ಲಿ ಅದನ್ನು ನಿಶ್ಚಿತವಾಗೂ ನಾನು ಆನಂದದಿಂದ ಪರಿಪಾಲಿಸುತ್ತೇನೆ. ಸರ್ವರ ಹಿತಕ್ಕಾಗಿ ಹೇಳಿದ ಆಜ್ಞೆಯುನ್ನು ಸ್ವಲ್ಪವೂ ಗೊಣಗದೆ ಪಾಲಿಸಬಲ್ಲವನೇ ಮಹಾನಾಯಕನಾಗಬಲ್ಲನು.
- ವಿಧೇಯತೆಯ ಈ ಸದ್ಗುಣವನ್ನು ನಿಮ್ಮಲ್ಲಿ ಬೆಳೆಸಿಕೊಳ್ಳಿ, ಆದರೆ ಅದಕ್ಕಾಗಿ ನಿಮ್ಮ ಆತ್ಮಶ್ರದ್ಧೆಯನ್ನು ಬಲಿಕೊಡದಿರಿ. ಹಿರಿಯರ ಆಜ್ಞೆ ಪಾಲಿಸದೆ ಏಕಸೂತ್ರತೆ ತರಲು ಶಕ್ಯವಿಲ್ಲ.

## ಸಹಕಾರಿಗಳೊಂದಿಗೆ ವರ್ತನೆ:

ಇತರರ ಯೋಜನೆಗಳ ಮೇಲೆ ತಣ್ಣೀರು ಎರಚದಿರಿ. ಟೀಕೆಯನ್ನು ಪೂರ್ತಿಯಾಗಿ ನಿಲ್ಲಿಸಿ. ಯೋಗ್ಯವಾಗಿ ಕೆಲಸ ನಡೆಸುತ್ತಿರುವವರಿಗೆಲ್ಲ ಉತ್ಸಾಹ, ನೆರವು ನೀಡಿ ಯಾರಾದರೂ ತಪ್ಪಿದ್ದು ಕಂಡುಬಂದಲ್ಲಿ ಅವರ ತಪ್ಪುಗಳನ್ನು ಹಗುರವಾಗಿ ಮನಗಾಣಿಸಿ. ಪರಸ್ಪರ ಟೀಕೆಯೇ ಎಲ್ಲ ತೊಂದರೆಗಳ ಮೂಲ. ಸಂಘಟನೆಗಳು ಮುರಿದುಬೀಳುವುದಕ್ಕೆ ಮುಖ್ಯ ಕಾರಣವೇ ಅದು.

## ಪರಸ್ಪರ ಪ್ರೇಮ

ನೀವು ಕೈಗೊಳ್ಳುವ ಸಂಘಟನಾ ಕಾರ್ಯದ ಯಶಸ್ಸು ನಿಮ್ಮಲಿನ ಪರಸ್ಪರ ಪ್ರೇಮದ ಮೇಲೆಯೇ ಪೂರ್ತಿಯಾಗಿ ನಿಂತಿದೆ. ಪರಸ್ಪರರಲ್ಲಿ ದ್ವೇಷ, ಅಸೂಯೆ, ಅಹಂಕಾರಗಳಿರುವವರೆಗೆ ಕಾರ್ಯದ ಪ್ರಗತಿಯ ಆಸೆಯನ್ನು ಬಿಡಿ.

ನಿಮ್ಮ ಸೋದರರ ಅಭಿಪ್ರಾಯಗಳನ್ನು ಗೌರವಿಸಲು ಸದಾ ಸಿದ್ಧರಿರಿ. ಯಾವತ್ತಿಗೂ ಸಮನ್ವಯ ಸಾಧಿಸಲು ಯತ್ನಿಸಿ. ಅದೇ ಯಶಸ್ಸಿನ ರಹಸ್ಯ.

## ವ್ಯವಹಾರ ದಕ್ಷತೆ

ಭಾರತದಲ್ಲಿನ ಎಲ್ಲ ಸಂಯುಕ್ತ ಪ್ರಯತ್ನಗಳೂ ನಮ್ಮ ಒಂದು ದೊಡ್ಡ ದೋಷದಿಂದಾಗಿ ಮಣ್ಣೂಗುಡುತ್ತಿವೆ. ಅದೆಂದರೆ, ವ್ಯವಹಾರದ ನಿಯಮಗಳನ್ನು ಕಠೋರವಾಗಿ ಪಾಲಿಸದಿರುವುದು. ವ್ಯವಹಾರವೆಂದರೆ ವ್ಯವಹಾರ, ಅದರ ಅತ್ಯಂತ ಬಿಗಿಯಾದ ಪಾಲನೆ, ಸ್ನೇಹ, ದಾಕ್ಷಿಣ್ಯಗಳಾವುವೂ ಅದಕ್ಕೆ ಅಡ್ಡಿಯಾಗಬಾರದು, ಪ್ರತಿಯೊಬ್ಬನೂ ತನ್ನ ವಶದಲ್ಲಿರುವ ಹಣದ ಸ್ವಚ್ಛಲೆಕ್ಕವನ್ನಿಡಲೇಬೇಕು. ಅಲ್ಲದೆ ಒಂದು ಕೆಲಸಕ್ಕಾಗಿ ನಿಗದಿಯಾದ ದುಡ್ಡನ್ನು ಇತರ ಕೆಲಸಗಳಿಗೆ ಎಂದಿಗೂ ಬಳಸಬಾರದು. ಮರುಕ್ಷಣ ಉಪವಾಸದಿಂದ ಸಾಯುತ್ತಿದ್ದರೂ ಸರಿಯೆ, ವ್ಯವಹಾರ ಶುಚಿತೆ ಎಂದರೆ ಇದು.

## ಚಿರಂತನ ಸಂಘಟನೆಯ ರಹಸ್ಯ

ನೀವು ನಿರ್ಮಿಸುವ ಸಂಘಟನೆಯ ಯಂತ್ರ ಹೇಗಿರಬೇಕೆಂದರೆ, ಯಾರು ಉಳಿಯಲಿ ಯಾರು ಅಳಿಯಲಿ ಅದು ತಾನಾಗಿಯೇ ನಡೆಯುವಂತಿರಬೇಕು. ನಮ್ಮಲ್ಲಿರುವ ಒಂದು ಭಾರಿ ದೋಷವೆಂದರೆ ನಾವೊಂದು ಚಿರಸ್ಥಾಯಿಯಾದ ಸಂಘಟನೆಯನ್ನು ಕಟ್ಟಲಾರೆವು. ಅದಕ್ಕೆ ಕಾರಣವೆಂದರೆ, ನಾವು ನಮ್ಮ ಅಧಿಕಾರಗಳನ್ನು ಇತರರೊಂದಿಗೆ ಹಂಚಿಕೊಳ್ಳೆವು ಮತ್ತು ನಾವು ಹೋದನಂತರ ಏನಾದೀತೆಂಬುದರ ಬಗ್ಗೆ ಎಂದೂ ಚಿಂತಿಸೆವು.

**ವಿಶುದ್ಧ ಶೀಲ :**

ನಾಯಕನಲ್ಲಿ ಶೀಲವಿಲ್ಲದಲ್ಲಿ ಅವನ ಬಗ್ಗೆ ನಿಷ್ಠೆ ಬೆಳೆಯಲು ಶಕ್ಯವಿಲ್ಲ. ಅವನ ಶೀಲ ಪೂರ್ಣಶುದ್ಧವಿದ್ದಾಗಲೇ ಅವನ ಬಗ್ಗೆ ಶ್ರದ್ಧೆ, ವಿಶ್ವಾಸ ಸದಾಕಾಲಕ್ಕೂ ಉಳಿದೀತು.

**ನಿಜವಾದ ಒರೆಗಲ್ಲು :**

ನಾಯಕನು ಒಂದು ಆಯುಷ್ಯದಲ್ಲಿ ತಯಾರಾಗುವವನಲ್ಲ. ಅದಕ್ಕಾಗಿಯೇ ಅವನು ಹುಟ್ಟಿ ಬರಬೇಕು. ಸಂಘಟನೆಯನ್ನು ಆರಂಭಿಸುವುದು, ಯೋಜನೆಗಳನ್ನು ತಯಾರಿಸುವುದು ಕಷ್ಟವೇನಲ್ಲ.

ಪುಟ 8 ಕ್ಕೆ ➤

➢ ಪುಟ 7 ರಿಂದ.....

ಆದರೆ ತೀರ ಭಿನ್ನ ಭಿನ್ನ ಪ್ರವೃತ್ತಿಯ ಜನರನ್ನು ಅದರ ಹೃದಯದಲ್ಲಿನ ಸಮಾನ ಭಾವಭಾವನೆಗಳ ಸೂತ್ರದಲ್ಲಿ ಪೋಣಿಸಿ ಅವರನ್ನು ಕಾರ್ಯರತಗೊಳಿಸುವುದರಲ್ಲಿದೆ, ನಾಯಕ ನಿಜವಾದ ಸತ್ವಪರೀಕ್ಷೆ. ಇದು ಬೇಕೆಂತ ಪ್ರಯತ್ನಸಿದ ಮಾತ್ರಕ್ಕೆ ಸಾಧಿಸುವಂತಹದಲ್ಲ. ಸ್ವಾಭಾವಿಕವಾಗಿಯೇ ಆಗಬೇಕಾದಂತಹದು.

### ಸೇವೆ ಮತ್ತು ಸ್ನೇಹ: ನೇತೃತ್ವಕ್ಕೆ ಅಡಿಗಲ್ಲು

ನಾಯಕನ ಪಾತ್ರ ನಿರ್ವಹಿಸುವುದು ಬಹು ಕಷ್ಟದ ಕೆಲಸ, ಅದಕ್ಕಾಗಿ ಅವನು 'ದಾಸಸ್ಯ ದಾಸಃ – ದಾಸರಲ್ಲಿ ದಾಸನಾಗಬೇಕಾಗುತ್ತದೆ. ಸಾವಿರದೊಂದು ಮನಸ್ಸುಗಳನ್ನು ಅವನು ಸಂಭಾಳಿಸಬೇಕಾಗುತ್ತದೆ. ಎಲ್ಲರಿಗೂ ಸೇವಕನಾಗಬಲ್ಲವನೇ ಎಲ್ಲರಿಗೆ ಸ್ವಾಮಿಯೂ ಆಗುತ್ತಾನೆ. ನಿನ್ನಲ್ಲಿ ಅಸೂಯೆಯ, ಸ್ವಾರ್ಥತೆಯ ಲವಲೇಶವೂ ಇರಬಾರದು. ಆಗಲೇ ನೀನೊಬ್ಬ ನಿಜವಾದ ನಾಯಕನಾಗಬಲ್ಲೆ, ಒಟ್ಟಿನಲ್ಲಿ ನಾಯಕನಾಗಲು ಮೊದಲನೆದಾಗಿ ಜನ್ಮಜಾತ ಲೋಕಸಂಗ್ರಹದ ಕೌಶಲ್ಯ ಎರಡನೆಯದಾಗಿ ನಿಃಸ್ವಾರ್ಥ ಇವು ಬೇಕು. ●

➢ ಪುಟ 1 ರಿಂದ.....

ಮುಂದುವರಿಯುವಂತೆ ಸೂಚಿಸಿ ತೆರೆಯ ಮರೆಯಲ್ಲಿದ್ದು ಅವನನ್ನು ಪ್ರೋತ್ಸಾಹಿಸಿ, ಸಲಹೆಗಳನ್ನೀಯುತ್ತಾ, ಸಹಾಯವನ್ನು ಮಾಡುತ್ತಾ ವೀಕ್ಷಿಸುತ್ತಿರಬೇಕು. ಮಗುವಿನ ಕಲಿಕಾ ಪ್ರಕ್ರಿಯೆಯಲ್ಲಿ ಅನಾವಶ್ಯಕ ಮಧ್ಯಪ್ರವೇಶ ಮಾಡಬಾರದು. ಈ ವಿಚಾರವನ್ನು ಬೋಧನೆ ಮಾಡುವುದು ಅತ್ಯಂತ ಹಾನಿಕಾರಕ. ಈ ವಿಚಾರದಲ್ಲಿ ಶ್ರೀಕೃಷ್ಣ ಪರಮಾತ್ಮ ಶ್ರೀಮದ್ಭವಗೀತೆಯಲ್ಲಿ ಅತ್ಯುತ್ತಮ ಸಲಹೆಯನ್ನು ನೀಡಿದ್ದಾನೆ:

**ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ।**
**ಸಯತ್ಪ್ರಮಾಣಂ ಕುರುತೇ ಲೋಕಸ್ತದಮನುವರ್ತತೇ॥**
**ಯದಿಹ್ಯಹಂ ನ ವರ್ತೇಯಂ ಜಾತು ಕರ್ಮಣ್ಯತಂದ್ರಿತಃ।**
**ಮಮವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ॥**
(ಕರ್ಮಯೋಗ 21,23)

ಆದುದರಿಂದ ಅರವಿಂದರು ಹೇಳುವಂತೆ – "Every child should be given practical opportunity as well as intellectual encouragement to develop all that is best in nature"

ಮಗು ತಪ್ಪು ಮಾಡಿದಾಗ ಅದು ಸ್ವೇಚ್ಛೆಯಿಂದ ತನ್ನ ತಪ್ಪನ್ನು ಒಪ್ಪಿಕೊಳ್ಳುವಂತೆ ಪ್ರೋತ್ಸಾಹಿಸಬೇಕು. ತಪ್ಪೊಪ್ಪಿಕೊಂಡಾಗ ಅದನ್ನು ಕ್ಷಮಿಸುವ ವಿಶಾಲ ಮನೋಭಾವ ನಮ್ಮಲ್ಲಿರಬೇಕು. ಈ ಪ್ರಕ್ರಿಯೆಯಲ್ಲಿ ಭಯದ ವಾತಾವರಣ ಸೃಷ್ಟಿಯಾಗಬಾರದು. ಭಯ ವಿನಾಶಕ್ಕೆ ನಾಂದಿಯಾಗುತ್ತದೆ. ಭಯ ಗೋಪ್ಯತೆ ಹಾಗೂ ಹುಸಿತನ ಮಕ್ಕಳಲ್ಲಿ ಈ ಕಾರಣಕ್ಕಾಗಿ ಬೆಳೆಯಬಹುದು. ತಾನು ಮಾಡಿದ ತಪ್ಪುಗಳ ವಿಚಾರ ಮಗು ಚಿಂತನೆ ಮಾಡಲು ಅವಕಾಶವಿರಬೇಕು. ತಪ್ಪು ಕೆಲಸ ಪಾಪಕೃತ್ಯವಲ್ಲ. ಅದೊಂದು ಗುಣಪಡಿಸಲು ಸಾಧ್ಯವಾದ ರೋಗವೊಂದರ ಚಿಹ್ನೆಯೆಂಬ ಅರಿವು ಮಗುವಿಗಾಗಬೇಕು. (ಮುಂದುವರಿಯುತ್ತದೆ.)

# ಏಕಾತ್ಮತಾ ಸ್ತೋತ್ರ

■ **ಚಾರುಮತಿ**

**ರತ್ನಾಕರಧೌತಪದಾಂ ಹಿಮಾಲಯ ಕಿರೀಟಿನಿಂ**
**ಬ್ರಹ್ಮರಾಜರ್ಷಿ ರತ್ನಾಢ್ಯಾಂ ವಂದೇ ಭಾರತ ಮಾತರಂ॥**

ಸಮುದ್ರರಾಜನಿಗೆ ಅನೇಕ ಹೆಸರುಗಳುಂಟು. 'ರತ್ನಾಕರ' ಎಂಬುದೂ ಒಂದು. ಈ ಕಡಲ ತಡಿಯಲ್ಲಿ ಅಸಂಖ್ಯಾತ ಮುತ್ತುರತ್ನಗಳು ಅಡಗಿವೆಯೆನ್ನುತ್ತಾರೆ. ಅದಕ್ಕೇ ಈ ಹೆಸರು ಇರುವುದು. ಹೀಗೆ ಬಹುಮೂಲ್ಯರತ್ನಗಳನ್ನು ತನ್ನಲ್ಲಿ ತುಂಬಿಕೊಂಡಿರುವ ಸಮುದ್ರವು ಯಾವ ಪವಿತ್ರವಾದ ಪಾದಗಳನ್ನು ತೊಳೆಯುತ್ತ ಪಾವನವಾಗುತ್ತದೆಯೋ, ಸಕಲ ದೇವತೆಗಳ ಆವಾಸಸ್ಥಾನವೆನಿಸಿ, ಅಸಂಖ್ಯಾತ ಋಷಿಮುನಿಗಳ ಸಾಧನೆಯ ತಪೋಭೂಮಿಯಾಗಿ ಪವಿತ್ರ ಕ್ಷೇತ್ರಗಳನ್ನು ತನ್ನಲ್ಲಿ ಹೊಂದಿರುವ ದೇವನದಿ, ಪುಣ್ಯನದಿ ದೇವಗಂಗೆಯ ಹರಿವಿನ ಹಾದಿಯನ್ನು ಹೊಂದಿರುವ ಹಿಮಾಲಯವೆಂಬ ಪವಿತ್ರಗಿರಿಯೆಂಬ ಮುಕುಟದಿಂದ ಶೋಭಿಸುತ್ತಲ್ಲಿರುವುದೋ, ಯಾವ ಪುಣ್ಯನೆಲದಲ್ಲಿ ಅಪಾರ ಸಂಖ್ಯೆಯಲ್ಲಿ ಬ್ರಹ್ಮರ್ಷಿಗಳೂ, ರಾಜರ್ಷಿಗಳೂ ಜನ್ಮವೆತ್ತಿ ಸಮೃದ್ಧಶಾಲಿಯನ್ನಾಗಿ ಈ ನೆಲವನ್ನು ಮಾಡಿದ್ದಾರೆಯೋ ಅಂತಹ ಪವಿತ್ರವಾದ ಭಾರತಮಾತೆಗೆ ನಾನು ನಮಸ್ಕರಿಸುತ್ತೇನೆ.

ಭಾರತವೇ ಒಂದು ತಪೋಭೂಮಿ. ಈ ನೆಲದ ಕಣಕಣವೂ ಪವಿತ್ರವೇ. ಇದು ದೇವಭೂಮಿ. ಇಲ್ಲಿರುವ ಪುಣ್ಯಸ್ಥಳಗಳು, ತೀರ್ಥಕ್ಷೇತ್ರಗಳು ಧಾರ್ಮಿಕಪ್ರಜ್ಞೆಯನ್ನು ಜನರಲ್ಲಿ ಮೂಡಿಸುತ್ತ ನಿರಂತರವಾಗಿ ಅಧ್ಯಾತ್ಮ ಶಕ್ತಿಯ ಬೆಳಕನ್ನು ಲೋಕಕ್ಕೆ ನೀಡುತ್ತಿವೆ. ದುಷ್ಟ ಶಿಕ್ಷಣ, ಶಿಷ್ಟರಕ್ಷಣವೆಂಬ ಸಂಕಲ್ಪದೊಂದಿಗೆ ನಾನಾ ಅವತಾರಗಳನ್ನು ಎತ್ತಿ 'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿಯುಗೇಯುಗೇ' ಎಂದು ನಿರೂಪಿಸಿದ ಪವಿತ್ರ ಸ್ಥಳಗಳು ದೇಶದ ಉದ್ದಗಲಕ್ಕೂ ಚಾಚಿಕೊಂಡಿವೆ. ಅಂತಹ ಕ್ಷೇತ್ರಗಳ ಜೊತೆಗೆ ಅಖಂಡ ಸಾಮ್ರಾಜ್ಯವನ್ನು ಕಟ್ಟಿ ಬೆಳೆಸಿ ಭಾರತವನ್ನು ವಿಶ್ವಗುರುವಿನ ಸ್ಥಾನಕ್ಕೆ ಏರಿಸಿದ ರಾಜರ್ಷಿಗಳು, ತಪೋಧನರಾದ ಬ್ರಹ್ಮರ್ಷಿಗಳು, ವೀರ ಕ್ಷತ್ರಿಯ ರಾಜಮಹಾರಾಜರು ಬಾಳಿ ಬದುಕಿನ ಪುಣ್ಯಸ್ಥಳಗಳೂ, ವಿದ್ಯಾಕೇಂದ್ರಗಳೂ ದೇಶದಾದ್ಯಂತ ಹಬ್ಬಿದೆ. ಅವುಗಳಲ್ಲಿ ಕೆಲವು ಪ್ರಮುಖ ನಗರಗಳನ್ನು ಹೆಸರಿಸುವುದಾದರೆ ಇದೋ,

**ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಆವಂತಿಕಾ**
**ವೈಶಾಲೀ ದ್ವಾರಿಕಾ ಧ್ಯೇಯಾ ಪುರೀ ತಕ್ಷಶಿಲಾ ಗಯಾ॥**

ರಾಮಾವತಾರದ ಅಯೋಧ್ಯೆ, ಕೃಷ್ಣಾವತಾರದ ಮಥುರಾ, ದ್ವಾರಿಕಾ ಹರಿಹರರ ಕ್ಷೇತ್ರಗಳಿಗೆ ಮುಖ್ಯದ್ವಾರವೆಂದೇ ಕರೆಯುವ ಗಂಗಾನದಿಯು ಹರಿಯುವ ಪವಿತ್ರ ಸ್ಥಳವಾದ ಹರಿದ್ವಾರ(ಮಾಯಾ), ಜಗದೀಶ್ವರನು ನೆಲೆಸಿದ ಕಾಶೀನಗರ, ಸುಂದರೇಶನ ನೆಲೆಮನೆಯಾದ ಕಾಂಚೀ ಪಟ್ಟಣ, ಮಹಾಕಾಲೇಶ್ವರನ ಉಜ್ಜಯಿನಿ (ಆವಂತಿಕಾ), ಜಗನ್ನಾಥನ ಕ್ಷೇತ್ರವಾದ ಪುರಿ, ಶಿಕ್ಷಣಕೇಂದ್ರಗಳಾಗಿ ಪ್ರಪಂಚದಾದ್ಯಂತ ಹೆಸರು ಪಡೆದಿದ್ದ ತಕ್ಷಶಿಲೆ, ಬುದ್ಧದೇವನ ಸ್ಥಳವಾದ ವೈಶಾಲಿ ಹೀಗೆ ಒಂದೇ, ಎರಡೇ ಪುಣ್ಯಭೂಮಿಯಲ್ಲಿರುವ ಸ್ಥಳಗಳು. ಇಂತಹ ಮಾತೃಭೂಮಿಗೆ ಶಿರಬಾಗಿ ವಂದಿಸುತ್ತೇನೆ. ●

➢ ಪುಟ 4 ರಿಂದ.....

- ಗುರುಕುಲ ಪದ್ಧತಿಯ ಅವನತಿ
- ಕುಲವಿದ್ಯೆಯ ಬಗೆಗೆ ಅಭಿಮಾನ ಕಡಿಮೆ ಆದದ್ದು.
- ಕುಲ ಅಥವಾ ಸಾಮರ್ಥ್ಯವನ್ನು ಆಧರಿಸದೇ ಇರುವ ವಿದ್ಯೆ
- ಯಾವುದು ಹಣ ಸಂಪಾದನೆಗೆ ಹೆಚ್ಚು ಅನುಕೂಲವೋ ಅದೇ ಶ್ರೇಷ್ಠ ಎಂಬ ಭಾವನೆ.
- ಮೆಕಾಲೆ ಪದ್ಧತಿಯ ಶಿಕ್ಷಣ ವಿಧಾನ.
- ಎಲ್ಲರಿಗೂ ಏಕರೂಪವಾದ ಶಿಕ್ಷಣ
- ಅಕ್ಷರಾಭ್ಯಾಸವೇ ಶಿಕ್ಷಣ ಎಂಬ ಭ್ರಮೆ.

ಈ ರೀತಿಯಲ್ಲಿ ಶಿಕ್ಷಣದ ದುಸ್ಥಿತಿಗೆ ಅನೇಕ ಕಾರಣವನ್ನು ನಾವು ಹುಡುಕಬಹುದು. ಇಂದಿನ ಮಾಪನದಂತೆ ಯಾರು ಅಕ್ಷರವನ್ನು ಬರೆಯಲು ಓದಲು ಕಲಿತಿದ್ದಾರೋ ಅವರು ಸಾಕ್ಷರರು. ಆದರೆ ಅಕ್ಷರಗಳೇ ಇಲ್ಲದ ಶ್ರುತಿಯುಗವು ಭಾರತದಲ್ಲಿತ್ತಲ್ಲ? ಅದೇ ಸ್ಥಿತಿಯಲ್ಲೇ ಜ್ಞಾನಕ್ಷೇತ್ರದಲ್ಲಿ ಭಾರತ ಅಗ್ರಮಾನ್ಯವಾಗಿತ್ತಲ್ಲ? ಲಿಪಿಯುಗ ಅಥವಾ ಪುಸ್ತಕದ ಯುಗ ಮಹಾಭಾರತ ಕಾಲದ ನಂತರ ಬಂದದ್ದು. ಪುಸ್ತಕಗಳು, ಇಂದಿನ ಯಂತ್ರಗಳು ಮಾನವ ಮಸ್ತಿಷ್ಕದ ದೌರ್ಬಲ್ಯದ ಲಕ್ಷಣಗಳು. ಹೆಚ್ಚು ಪುಸ್ತಕ ಅಥವಾ ಯಂತ್ರಾವಲಂಬಿಗಳಾದರೆ ಮಸ್ತಿಷ್ಕದ ಸಾಮರ್ಥ್ಯ ಕುಂದುತ್ತಾ ಹೋಗುವುದು. ಹಾಗಾದರೆ ಈ ಎಲ್ಲಕ್ಕೂ ಕಾರಣ ಮೇಲೆ ಹೇಳಿದಂತೆ ಗುರುಕುಲ ಪದ್ಧತಿ. ಇದನ್ನೇ ಉಪನಿಷತ್ತುಗಳು ಹೇಳುವುದು 'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್' ಎಂಬುದಾಗಿ. (ಈ ವಾಕ್ಯ ಯದ್ಯಪಿ ಆತ್ಮ ವಿದ್ಯೆಗೆ ಹೇಳಿರುವಂತಹದ್ದು.) ಆದರೆ ಪುರಾಣ ಇತಿಹಾಸಗಳನ್ನು ಗಮನಿಸಿದರೆ ಎಲ್ಲ ವಿದ್ಯೆಗಳೂ ಗುರುಮುಖದಿಂದ ಪ್ರಾಪ್ತವಾಗಬೇಕೆಂಬುದೇ ನಿಯಮವಾಗಿತ್ತು.

ಆ ಗುರುವೂ ಕೇವಲ ವಿಷಯವನ್ನು ಬೌದ್ಧಿಕವಾಗಿಯಷ್ಟೇ ತಿಳಿಯದೇ ಅದನ್ನು ಸ್ವತಃ ಆಚರಿಸುವಂತವನಾಗಿದ್ದ. ಅದಕ್ಕಾಗಿಯೇ ಅವನಿಗೆ 'ಆಚಾರ್ಯ' ಎಂಬ ಶಬ್ದವನ್ನು ಉಪಯೋಗಿಸುತ್ತಿದ್ದರು. ಆಚಾರ್ಯನೆಂದರೆ

**ಆಚಿನೋತಿ ಚ ಶಾಸ್ತ್ರಾರ್ಥಮ್ ಆಚಾರೇ ಸ್ಥಾಪಯತ್ಯಪಿ।**
**ಸ್ವಯಂಮಾಚರತಿ ಶ್ರೇಷ್ಠಃ ತಸ್ಮಾದಾಚಾರ್ಯ ಉಚ್ಯತೇ॥**

ಅರ್ಥಾತ್ ಸ್ವತಃ ವಿಶಿಷ್ಟವಾದ ಪರಂಪರಾಧಾನ ಮಾಡುತ್ತಾ, ತಾನೂ ಅದರಂತೆಯೇ ನಡೆದುಕೊಂಡು, ಅಂತೇವಾಸಿಗಳಿಗೆ ಯಾರು ಮಾದರಿಯಾಗಿರುತ್ತಾನೋ ಅವನೇ ಆಚಾರ್ಯ. ಇಂತಹ ವ್ಯಕ್ತಿಗಳ ಅಥವಾ ಮಹಾತ್ಮರ ಪದತಲದಲ್ಲಿ ಕುಳಿತು ಅಧ್ಯಯನ ಮಾಡಿದ ವ್ಯಕ್ತಿ ತಾನೂ ಮಹಾತ್ಮನಾಗಲೇ ಬೇಕು.

ಅದಕ್ಕಾಗಿಯೇ ಕವಿಯೊಬ್ಬನು ಹೇಳುವಂತೆ ಗುರುವಿಗೆ ಜಗತ್ತಿನಲ್ಲಿರುವ ಯಾವುದನ್ನೂ ಹೋಲಿಸಲು ಸಾಧ್ಯವಿಲ್ಲ. ಏಕೆಂದರೆ ನಿಜವಾದ ಗುರುವಾದವನು ತನ್ನಂತಹ ಅನೇಕರನ್ನು ಸೃಷ್ಟಿ ಮಾಡುತ್ತಾನೆ. ಲೋಕದಲ್ಲಿ ಇಂತಹದ್ದಕ್ಕೆ ಉದಾಹರಣೆಗಳೇ ಇಲ್ಲ ಎಂದು ಹೇಳುತ್ತಾನೆ.

## ಶಿಕ್ಷಣವೇ ಸಂಸ್ಕಾರ

ಪ್ರಾಚೀನ ಕಾಲದಲ್ಲಿ ಶಿಕ್ಷಣವೇ ಸಂಸ್ಕಾರ ಎನಿಸಿಕೊಳ್ಳುತ್ತಿತ್ತು. ಸಂಸ್ಕಾರವೆಂದರೆ ಗುಣಗಳ ಪೂರಣ ಅಥವಾ ದೋಷಗಳ ನಿವಾರಣೆ. ಭಾರತೀಯ ಪರಂಪರೆಯಲ್ಲಿ ಬರುವ ಗರ್ಭಾಧಾನಾದಿ ಎಲ್ಲ ಸಂಸ್ಕಾರಗಳಲ್ಲಿಯೂ ಈ ಎರಡೇ ಪ್ರಕ್ರಿಯೆ ಕಾಣಸಿಗುತ್ತದೆ. ವಸ್ತುತಃ ಶಿಕ್ಷಣದಿಂದಲೂ ಆಗಬೇಕಾಗದ ಕೆಲಸ ಇದೇ ಆಗಿದೆ. ಗುರುವಿನ ಸನ್ನಿಧಿಯಲ್ಲಿ ವಿದ್ಯಾರ್ಥಿಯನೊಬ್ಬನಿದ್ದಾಗ ಗುರುವನ್ನು ನೋಡಿಯೋ ಸಹಧ್ಯಾಯಿಗಳನ್ನು ನೋಡಿಯೋ ಸ್ವತಃ ಚಿಂತನೆ ಮಾಡುವುದರ ಮೂಲಕವೋ ಅಥವಾ ಗ್ರಂಥಾಧ್ಯಯನಗಳ ಮೂಲಕವೋ ವ್ಯಕ್ತಿ ತನ್ನಲ್ಲಿನ ದೋಷಗಳನ್ನು ನಿವಾರಿಸಿಕೊಂಡು ಗುಣಗಳನ್ನು ಪೂರೈಸಿಕೊಳ್ಳುತ್ತಾನೆ. ಹಾಲಿನಿಂದ ತುಪ್ಪವಾಗುವಲ್ಲಿಯವರೆಗೆ ಯಾವ ಪ್ರಕ್ರಿಯೆಯನ್ನು ನಾವು ಮಾಡುತ್ತೇವೆಯೋ ಅವೆಲ್ಲವೂ ಸಂಸ್ಕಾರವೇ. ಅರ್ಥಾತ್ ದೋಷಗಳನ್ನು ತೊಡೆದುಹಾಕುವುದು ಅಥವಾ ಅಪೇಕ್ಷಿತ ಗುಣಗಳನ್ನು ತುಂಬುವುದು. ಇದರ ಪರಿಣಾಮದಿಂದಲೇ ಹಾಲಿಗಿಂತ ತುಪ್ಪದಲ್ಲಿ ಸತ್ವವೂ ಹೆಚ್ಚು, ಬಹೂಪಯೋಗಿತತೆ ಇದೆ. ಆಯುರ್ವೇದ ವೈದ್ಯರಂತೂ ಇದನ್ನು ದೇವತೆಗಳಿಗೇ ಆಹಾರ ಆದ್ದರಿಂದ ಘೃತ ಮನುಷ್ಯನಿಗೆ ಅಮೃತಕ್ಕೆ ಸಮಾನ ಎನ್ನುತ್ತಾರೆ. ಅಂತೆಯೇ ಅಸಂಸ್ಕೃತನಾದ ಅಥವಾ ಅಶಿಕ್ಷಿತನಾದ (ಶಾಲೆಗೆ ಹೋದರೆ ಮಾತ್ರ ಶಿಕ್ಷಣ ಎಂಬ ಭಾವನೆಯಿಂದಲ್ಲ) ವ್ಯಕ್ತಿಗಿಂತ ಶಿಕ್ಷಿತನಾದ ಅಥವಾ ಸಂಸ್ಕೃತನಾದ ವ್ಯಕ್ತಿಯಲ್ಲಿ ಸತ್ವ ಮತ್ತು ಜನೋಪಯೋಗಿತತೆ ಹೆಚ್ಚು.

## ಉಪನಿಷದುಕ್ತ ಮಾರ್ಗವೇ ಪರಿಹಾರ

ಅನೇಕ ಕಡೆಗಳಲ್ಲಿ ಇಂದು ವೇದಗಳನ್ನು ಅಥವಾ ಉಪನಿಷತ್ತುಗಳನ್ನು ಅವಲಂಬಿಸಿಯೇ ಶಿಕ್ಷಣ ಪದ್ಧತಿ, ವಿಷಯಗಳ ವಿಭಾಗ ಇತ್ಯಾದಿಗಳು ಆರಂಭವಾಗಿವೆ. ಗುರುಕುಲಕ್ರಮದ ಪುನರುಜ್ಜೀವನ ಅಲ್ಲಲ್ಲಿ ಕಾಣುತ್ತಿದೆ. ಆಧುನಿಕ ಕಾಲದಲ್ಲಿಯೂ ಶಾಶ್ವತವಾದ ಸತ್ಯವನ್ನು ಬೋಧಿಸುವ ಉಪನಿಷತ್ತುಗಳು ಔಚಿತ್ಯವನ್ನು ಹೊಂದಿದೆ. ನಚಿಕೇತನು ಯಮನಲ್ಲಿಗೆ ಹೋಗಿ ಜ್ಞಾನವನ್ನು ಪಡೆದ ವಿಧಾನ, ಜಾಬಾಲನು ಸತ್ಯಕಾಮರಲ್ಲಿ ಪಡೆದ ಜ್ಞಾನದ ವಿಧಾನ, ಭೃಗು ತನ್ನ ತಂದೆಯಾದ ವರುಣರಲ್ಲಿ ವಿದ್ಯೆಯನ್ನು ಪಡೆದ ವಿಧಾನ, ಬ್ರಹ್ಮನಿಷ್ಠರಾದ ಸುಕೇಶಾದಿಗಳು ಪಿಪ್ಪಲಾದನಿಂದ ಪಡೆದ ವಿದ್ಯೆಯ ಭಾಗ ಇತ್ಯಾದಿ ಹತ್ತಾರು ವಿಧಾನಗಳು ಇಂದಿನ ಕಾಲಕ್ಕೂ ಮಾದರಿಗಳು. ಇವರೆಲ್ಲರೂ ತಮ್ಮ ತಮ್ಮ ಗುರುಗಳಿಂದ ಆತ್ಮವಿದ್ಯೆಯನ್ನು ಪಡೆದರು. ಅವರು ಆಶ್ರಯಿಸಿದ ಕ್ರಮ, ಶ್ರದ್ಧೆ, ನಿರಂತರ ಪ್ರಯತ್ನ, ಗುರುವಿನ ವಾಕ್ಯ ಪರಿಪಾಲನೆ, ಜಿಜ್ಞಾಸಾ ಪ್ರವೃತ್ತಿ, ಅಹಂಕಾರ ರಾಹಿತ್ಯ ಇವೆಲ್ಲವೂ ಇಂದಿನ ಕಾಲಕ್ಕೂ ಅನ್ವಯವಾಗುವ ವಿಷಯಗಳಾಗಿವೆ. ಅಷ್ಟೇ ಅಲ್ಲ ಎಲ್ಲ ವಿಷಯಗಳ ಗ್ರಹಣೆಗೂ ಅನಿವಾರ್ಯವಾಗಿದೆ.

ಮೆಕಾಲೆ ನಮ್ಮ ದೇಶದ್ದಲ್ಲದ ಶಿಕ್ಷಣ ಕ್ರಮವನ್ನು ನಮ್ಮ ದೇಶದಲ್ಲಿ ತಂದ. ಇದು ನಮ್ಮ ಸಂಸ್ಕೃತಿಗೆ ನಮ್ಮ ಜನರ ಮಾನಸಿಕತೆಗೆ, ನಮ್ಮಲ್ಲಿನ ವಿದ್ಯಾಶಾಖೆಗಳಿಗೆ ಹೆಚ್ಚೇನು ನಮ್ಮ ಭೌಗೋಳಿಕತೆಗೆ ಮತ್ತು ಮಾನಸಿಕತೆಗೂ ಒಗ್ಗದ ಕ್ರಮವಾಗಿದೆ. ಆದರೆ 'ಅಂಧೇನೈವ ನೀಯಮಾನಾ ಯಥಾಂಧಾಃ' ಎಂಬಂತೆ ಅವನ ಕ್ರಮವನ್ನು ನೂರಾರು ವರ್ಷ ಅನುಸರಿಸಿದ್ದಾಗಿದೆ. ಅದರ ಪರಿಣಾಮವಾಗಿ ನಮ್ಮಲ್ಲಿನ ಅನೇಕ ಜ್ಞಾನ ಶಾಖೆಗಳನ್ನು, ಸಂಸ್ಕೃತಿಯನ್ನು ಪರಂಪರೆಯನ್ನು ಕಳೆದುಕೊಂಡಿದ್ದೇವೆ. ಆದರೂ ಇವು ಯಾವುವೂ ಇನ್ನು ಸತ್ತಿಲ್ಲ. ಇನ್ನೂ ಜೀವಂತವಾಗಿಯೇ ಇವೆ. ಈಗಲಾದರೂ ಎಚ್ಚೆತ್ತುಕೊಂಡರೆ, ಉಪನಿಷತ್ತುಗಳಲ್ಲಿ ಹೇಳಿದ ಸಿದ್ಧಾಂತವನ್ನವಲಂಬಿಸಿ, ಕ್ರಮವನ್ನವಲಂಬಿಸಿ, ಇಂದಿನ ಸಮಾಜಕ್ಕೆ ಪೂರಕವಾದ ರೀತಿಯಲ್ಲಿ ಅಪೇಕ್ಷಿತವಾದ ಪರಿಷ್ಕಾರಗಳನ್ನು ಮಾಡಿಕೊಂಡು, ಮುನ್ನಡೆದರೆ ನಾವು ನಮ್ಮತನವನ್ನೂ, ನಮ್ಮ ವಿದ್ಯಾಶಾಖೆಗಳನ್ನೂ, ನಮ್ಮ ವೈಶಿಷ್ಟ್ಯವನ್ನೂ ಜಗದ್ಗುರುತ್ವವನ್ನೂ ಕಾಪಾಡಿಕೊಳ್ಳಬಹುದು. ಚಕ್ರಗತಿಯಲ್ಲಿ ಮುಂದುವರೆಯುವ ಜಗತ್ತಿನಲ್ಲಿ ಪ್ರಾಚೀನ ಕ್ರಮದ ಪುನರುಜ್ಜೀವನ ಆದಂತಾಗುವುದು ಸಹಜವೂ, ತುರ್ತು ಅವಶ್ಯಕತೆಯೂ ಹೌದು. ●

# ಮಕ್ಕಳಿಗೆ ಸಕಾರಾತ್ಮಕ ಅನುಭವಗಳು ಹೆಚ್ಚಲಿ

■ ಡಾ॥ ರಾಜೇಂದ್ರ. ಕೆ. ಎಂ.
ಅಸೋಸಿಯೇಟ್ ಪ್ರೊಫೆಸರ್,
ಮಕ್ಕಳ ಮತ್ತು ಹದಿಹರೆಯದ ಮನೋವೈದ್ಯಶಾಸ್ತ್ರ ವಿಭಾಗ
ನಿಮ್ಹಾನ್ಸ್, ಬೆಂಗಳೂರು – 560029

ಸಮಾಜವು ಮಕ್ಕಳಿಗೆ ಹೆಸರನ್ನು ನೀಡಿದರೆ ಸಾಕೇ? ಸಮಾಜವು ಮಕ್ಕಳಿಗೆ ಬಲವಾದ ಆತ್ಮವಿಶ್ವಾಸದ ನಂಬಿಕೆಯನ್ನು ನೀಡಬೇಕು ಅಲ್ಲವೇ? ಎಲ್ಲರಿಗೂ ಬಾಲ್ಯ ಬಹುತೇಕವಾಗಿ ಒಳ್ಳೆಯ ನೆನಪುಗಳ ಅನುಭವಗಳ ಸಂಗ್ರಹ. ಆ ಅನುಭವಗಳ ನೆನಪುಗಳೇ ನಾನು ಎಂಬ ಆಕಾರವನ್ನು ನಮಗೆ ನೀಡಿದೆ. ಅದೇ ಬಹುತೇಕವಾಗಿ ಬಾಲ್ಯ ಅನುಭವಗಳ ನೆನಪುಗಳು ನಕಾರಾತ್ಮಕವಾಗಿದ್ದಲ್ಲಿ ನಮಗೆ ವಿಶ್ವಾಸ ಕಮ್ಮಿ ಇರುತ್ತಿತ್ತು ಮತ್ತು ನೋವುಗಳು ಹೆಚ್ಚು ಇರುತ್ತಿದ್ದವು.

ಮಾನಸಿಕ ಆರೋಗ್ಯದ ಬಗ್ಗೆ ಅರಿವಿನ ಕೊರತೆಯಿಂದಾಗಿ ಮಕ್ಕಳು ಇದನ್ನು ಅನುಭವಿಸುತ್ತಿದ್ದಾರೆ. ಪ್ರತಿ ಒಂದು ಮಗುವಿಗೆ ಸಕಾರಾತ್ಮಕ ನೆನಪಿನ ಅನುಭವಗಳನ್ನು ಕೊಡುವ ಮೂಲಕ ಅವರ ಆತ್ಮವಿಶ್ವಾಸ ಮತ್ತು ಆತ್ಮಸ್ಥೈರ್ಯವುಳ್ಳ ವ್ಯಕ್ತಿಗಳನ್ನಾಗಿ ಮಾಡುವ ಜವಾಬ್ದಾರಿ ಸಮಾಜದ್ದಲ್ಲವೇ? ನಮ್ಮೆಲ್ಲರದಲ್ಲವೇ? ಸಮಾಜವಾಗಲಿ, ಮನೆಯಾಗಲಿ ಅಥವಾ ಶಾಲೆಯಾಗಲಿ, ಒಳ್ಳೆ ಪರಿಸರ, ಒಳ್ಳೆ ಸಂಬಂಧಗಳು ಮಕ್ಕಳಿಗೆ ಅನುಭವಗಳನ್ನು ಕೊಡಬಲ್ಲವು.

ನಾವು ಹೇಗೆ ಊಟ ಮಾಡುವ ದೈಹಿಕ ಚಟುವಟಿಕೆಯನ್ನು ಕ್ರಮೇಣ ಸಹಾಯದಿಂದ ಕಲಿಯುತ್ತವೆಯೋ ಹಾಗೆಯೇ ಮಕ್ಕಳ ಮನಸ್ಸಿನಲ್ಲಿ ಅವರಿಗೆ ಅವರ ಹತ್ತಿರ ಸಂಬಂಧಿಗಳ ಒಡನಾಟದಿಂದ ಆಗುವ ಪರಿಸರದಲ್ಲಿ ಸಿಗುವ ಅನುಭವಗಳಿಂದ ಅವರ ಬಗೆಗಿನ ಸಂಬಂಧಗಳ ಬಗೆಗಿನ ಹಾಗೂ ಸಮಾಜದ ಬಗೆಗಿನ ಒಳ ಆಲೋಚನೆಗಳನ್ನು ಹಾಗೂ ನಂಬಿಕೆಗಳನ್ನು ನಡವಳಿಕೆಗಳನ್ನು ಕ್ರಮೇಣ ಕಲಿಯುತ್ತಾ ಹೋಗುತ್ತಾರೆ. ಅವರ ಪರಿಸರದಲ್ಲಿ ಹಾಗೂ ಸಂಬಂಧಗಳಲ್ಲಿ ಸಿಗುವ ಅನುಭವಗಳೇ ಮಕ್ಕಳಲ್ಲಿ ಒಳ್ಳೆಯ ನಡವಳಿಕೆ, ಭಾವನೆಗಳನ್ನು ಹಾಗೂ ಸಂಬಂಧಗಳನ್ನು ನಿಭಾಯಿಸುವ ಶಕ್ತಿಗಳನ್ನು ನೀಡುತ್ತವೆ. ನಮ್ಮ ಸಮಾಜ ಬಹಳ ಬೇಗ ಬೇಗ ಬದಲಾಗುತ್ತಿದೆ. ಎಲ್ಲರಲ್ಲೂ ಓದಿಗೆ ಹಾಗೂ ವೃತ್ತಿಪರ ಜೀವನಕ್ಕೆ ಆದ್ಯತೆ ಹೆಚ್ಚುತ್ತಿದೆ. ವಲಸೆ ಹೆಚ್ಚುತ್ತಿದೆ, ವಿಭಕ್ತ ಕುಟುಂಬ ಹೆಚ್ಚುತ್ತಿವೆ, ಕುಡಿತ ಹೆಚ್ಚುತ್ತಿದೆ, ಮೊಬೈಲ್‌ಬಳಕೆ ಹೆಚ್ಚುತ್ತಿದೆ, ಮಾಧ್ಯಮಗಳಲ್ಲಿ ನಕಾರಾತ್ಮಕ ವಿಷಯಗಳು ಹೆಚ್ಚುತ್ತಿವೆ, ಇದರ ಜೊತೆಗೆ ಬಡತನ ಇದ್ದೇ ಇದೆ.

ಇವೆಲ್ಲವು ಮಕ್ಕಳ ಬೆಳವಣಿಗೆಗೆ ಸವಾಲುಗಳಾಗಿವೆ ಮತ್ತು ಮಕ್ಕಳಲ್ಲಿ ಮಾನಸಿಕ ತೊಂದರೆ ಹೆಚ್ಚುತ್ತಿವೆ. ಇವುಗಳಿಂದ ಆಗುತ್ತಿರುವ ಒತ್ತಡ ಬಹುತೇಕ ಸಾಂಕ್ರಾಮಿಕವಲ್ಲದ ಅಸ್ವಸ್ಥತೆಗಳಿಗೆ ಕಾರಣವಾಗಿದೆ. ಈ ಕಾರಣದಿಂದ ಎಲ್ಲಾ ವಯಸ್ಕರು/ ಪೋಷಕರು/ ಗುರುಗಳು ಮಕ್ಕಳ ಬೆಳವಣಿಗೆ, ಬೆಳವಣಿಗೆಗೆ ಅಗತ್ಯವಿರುವ ಅನುಭವಗಳು, ಪೋಷಕರಿಂದ ಬೇಕಿರುವ ಶುಶ್ರೂಷೆ, ವ್ಯತಿರಿಕ್ತ ಅನುಭವಗಳು ಮತ್ತು ಅವುಗಳ ಪರಿಣಾಮಗಳ ಬಗೆಗಿನ ಮಾಹಿತಿ ಮಕ್ಕಳಲ್ಲಿ ಕಂಡು ಬರುವ ಬೆಳವಣಿಗೆಯ/ ನಡವಳಿಕೆಯ/ ಭಾವನೆಗಳ ಕಷ್ಟಗಳ ಬಗೆಗಿನ ಅರಿವು ಮತ್ತು ಅವರಿಗೆ ಬೇಕಿರುವ ಸಹಾಯಗಳು ಇವೆಲ್ಲದರ ಬಗ್ಗೆ ತಿಳಿದುಕೊಳ್ಳಬೇಕಾಗಿದೆ.

ಈ ವಿಷಯಗಳಲ್ಲಿ ಪೋಷಕರ ಪಾತ್ರ ಮತ್ತು ಶಾಲೆಯ ಹಾಗೂ ಗುರುಗಳ ಪಾತ್ರಗಳ ಬಗ್ಗೆಯು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ. ಅದರ ಜೊತೆಗೆ ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ಆತ್ಮಸ್ಥೈರ್ಯ ತುಂಬುವ ಮತ್ತು ಅವರಿಗೆ ಬೇಕಾದ ಜೀವನ ಕೌಶಲ್ಯಗಳನ್ನು ತಿಳಿಸಿಕೊಡುವ ಸಾಮರ್ಥ್ಯ ನಮ್ಮದಾಗಿಸಿಕೊಳ್ಳಬೇಕಾಗಿದೆ.

ಇದು ಮಕ್ಕಳ ಬೆಳವಣಿಗೆ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಮುಂಬರುವ ಸಂಚಿಕೆಗಳಿಗೆ ಪೀಠಿಕೆಯಾಗಿದೆ ಮತ್ತು ಈ ಮೇಲೆ ಚರ್ಚಿಸಿದ ವಿಷಯಗಳನ್ನು ಉಪಯುಕ್ತವಾಗುವ ರೀತಿಯಲ್ಲಿ ಮುಂದಿನ ಸಂಚಿಕೆಗಳಲ್ಲಿ ವಿಶ್ಲೇಷಿಸಲು ಪ್ರಯತ್ನಿಸುತ್ತೇನೆ. ಇದರಿಂದ ವೈಜ್ಞಾನಿಕ ಅರಿವು ಮೂಡಲಿ ಮತ್ತು ಮಕ್ಕಳಿಗೆ ಸಕಾರಾತ್ಮಕ ಅನುಭವಗಳು ಹೆಚ್ಚಲಿ ಎಂದು ಆಶಿಸುತ್ತೇನೆ. ●

## ಮಾತು ಮಾಣಿಕ್ಯ

ಅಜ್ಞಾನ–ಆಲಸ್ಯಗಳಿಂದ ಆಗಾಗ ಜಡಗಟ್ಟುವ ಸಮಾಜವನ್ನು ಜಾಗೃತಗೊಳಿಸಿ, ಅಲ್ಲಿ ಸಂಸ್ಕೃತಿಯ ಜ್ಯೋತಿಯನ್ನು ಬೆಳಗಿಸಲು ಮಾತಿನ ಜ್ಯೋರ್ತಿಲಿಂಗವೇ ಬೇಕು !

ಮಾತಿನಿಂದ ಒಬ್ಬನನ್ನು ಕೊಲ್ಲಬಹುದೆಂಬುದು ನಿಜವಾದರೂ ಮಾತಿನಿಂದ ಜಗತ್ತನ್ನೇ ಗೆಲ್ಲಬಹುದೆಂಬ ಸತ್ಯವನ್ನು ಅಲ್ಲಗಳೆಯಲಾಗದು. – ಸ್ವಾಮಿ ಪುರುಷೋತ್ತಮಾನಂದ


## ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಪತ್ರಿಕೆಯ ಪ್ರಾರೂಪ

(ಪ್ರಾರೂಪ 8, ವಿಧಿ 8)

| | |
|---|---|
| ಪ್ರಕಟಣೆಯ ಸ್ಥಳ | : ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಪ್ರಕಾಶಕ | : ಜೆ. ಎಂ. ಜೋಶಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.) |
| ಮಾಲೀಕತ್ವ | : ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.) ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಸಂಪಾದಕ | : ಜೆ. ಎಂ. ಜೋಶಿ (ಮೇಲಿನದೇ ವಿಳಾಸ) |
| ಭಾರತದ ಪ್ರಜೆಯೇ | : ಹೌದು |
| ಮುದ್ರಕ | : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು – 560 019 |

ಮೇಲೆ ಕೊಟ್ಟಿರುವ ವಿಷಯಗಳು ನನ್ನ ನಂಬಿಕೆಯಲ್ಲಿ ಪೂರ್ಣ ಸತ್ಯವೆಂದು ನಾನು ಘೋಷಿಸುತ್ತೇನೆ.

ಬೆಂಗಳೂರು (ಸಹಿ) ಜೆ. ಎಂ. ಜೋಶಿ
1.3.2022 ಪ್ರಕಾಶಕ

# ಅಭ್ಯಾಸ ವರ್ಗ – ಒಂದು ವರದಿ






ಕರ್ನಾಟಕ ರಾಜ್ಯ ಮಹಾ ವಿದ್ಯಾಲಯಗಳ ಶಿಕ್ಷಕರ ಸಂಘ (ರಿ) ಇವರ ಆಶ್ರಯದಲ್ಲಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ವಿಭಾಗದಿಂದ 18–03–2023ರಂದು ಗಂಗಾವತಿ ತಾಲೂಕಿನ ಶ್ರೀ ರಾಮನಗರದ ವಿದ್ಯಾನಿಕೇತನ ಸಮೂಹ ಸಂಸ್ಥೆಯಲ್ಲಿ ಅಭ್ಯಾಸ ವರ್ಗ ಯಶಸ್ವಿಯಾಗಿ ಜರುಗಿತು.

ಅಭ್ಯಾಸ ವರ್ಗವನ್ನು ಉದ್ಘಾಟಿಸಿ ಮಾತನಾಡುತ್ತಾ ವಿದ್ಯಾನಿಕೇತನ ಶಿಕ್ಷಣ ಸಮೂಹ ಸಂಸ್ಥೆಯ ಸಂಸ್ಥಾಪಕರಾದ ಶ್ರೀನೆಕ್ಕಂಟಿ ಸೂರಿಬಾಬುರವರು "ಅಭ್ಯಾಸ ವರ್ಗಕ್ಕೆ ಅವರ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ಸಂತೋಷ ವ್ಯಕ್ತಪಡಿಸುತ್ತಾ ಅಭ್ಯಾಸ ವರ್ಗಕ್ಕೆ ಆಗಮಿಸಿದ ಎಲ್ಲಾ ಪ್ರಾಧ್ಯಾಪಕರನ್ನೂ ಅಭಿನಂದಿಸಿದರು. ಪ್ರಾಧ್ಯಾಪಕರು ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ರಾಷ್ಟ್ರವು ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತಿದೆ. ಆದರೆ ಗ್ರಾಮೀಣ ಪ್ರದೇಶದಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟದಲ್ಲಿ ಕಡಿಮೆ ಇರುವುದನ್ನು ಗಮನಿಸಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಇನ್ನು ಹೆಚ್ಚಿನ ಶೈಕ್ಷಣಿಕ ಸೇವೆ ಹಾಗೂ ಸವಲತ್ತುಗಳು, ಚಟುವಟಿಕೆಗಳು, ಯೋಜನೆಗಳು ಅವಶ್ಯಕವಾಗಿವೆ. ಇಂತಹ ಸೇವೆಯನ್ನು ಒದಗಿಸಲು ಆಧ್ಯಾಪಕರು ಇನ್ನಷ್ಟು ಹೆಚ್ಚಿನ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು. ಈ ನಿಟ್ಟಿನಲ್ಲಿ ಇಂತಹ ಅಭ್ಯಾಸ ವರ್ಗಗಳಲ್ಲಿ ಪ್ರಾಧ್ಯಾಪಕರು ಭಾಗವಹಿಸಿ "ತಮ್ಮ ವಿಷಯದ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆದುಕೊಂಡು ವಿದ್ಯಾರ್ಥಿಗಳಿಗೆ ಬೋಧಿಸಿದರೆ ಉತ್ತಮ" ಎಂದರು.



ಆಶಯ ನುಡಿಗಳನ್ನಾಡಿದ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ ಸದಸ್ಯರೂ, ವಿಭಾಗ ಪ್ರಮುಖರಾದ ಪ್ರೊ. ಶಿವಾನಂದ ಮೇಟಿಯವರು ಮಾತನಾಡುತ್ತಾ "ಕರ್ನಾಟಕ ರಾಜ್ಯ ಪದವಿ ಮಹಾವಿದ್ಯಾಲಯಗಳ ಶಿಕ್ಷಕರ ಸಂಘವು ಸಂಘಟಿಸಿದ ಮಹತ್ವಪೂರ್ಣ ಕಾರ್ಯಗಳನ್ನು ವಿವರಿಸುತ್ತ ರಾಷ್ಟ್ರೀಯ ಪ್ರಮುಖ ವಿಷಯಗಳ ಕುರಿತು ವಿಚಾರ ಸಂಕೀರ್ಣಗಳು, ರಾಷ್ಟ್ರೀಯ ದಿನಾಚರಣೆಗಳು ಹಾಗೂ ಸಂವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಇದೇ ಸಂದರ್ಭದಲ್ಲಿ ಕೇವಲ ವಿಚಾರ ಸಂಕಿರಣಗಳಿಗೆ ಸೀಮಿತವಾಗದೆ  ಶಿಕ್ಷಕರ ನೋವು ಸಂಕಷ್ಟಗಳಿಗೆ ಪ್ರತಿ ಸ್ಪಂದಿಸುವ ಸಂಘವಾಗಿದೆ. ಶಿಕ್ಷಕರ ಹಲವಾರು ಬೇಡಿಕೆಗಳಿಗೆ ಸರಕಾರದ ಮೇಲೆ ಒತ್ತಡ ತಂದು ಬೇಡಿಕೆಗಳನ್ನು ಪೂರೈಸಲಾಗಿದೆ. ಕೋವಿಡ್‌ನಂತಹ ಸಂಕಷ್ಟದ ಸಂದರ್ಭದಲ್ಲಿ ನೊಂದ ಶಿಕ್ಷಕರಿಗೆ ಸಹಾಯ ಸಹಕಾರವನ್ನು ಸಂಘ ನೀಡಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ರಾಜ್ಯ ಮಹಾವಿದ್ಯಾಲಯಗಳ ಶಿಕ್ಷಕರ ಸಂಘದ ರಾಜ್ಯ ಅಧ್ಯಕ್ಷರಾದ ಡಾ. ಗುರುನಾಥ್ ಬಡಿಗೇರವರು ಮಾತನಾಡುತ್ತಾ ಸಂಘದ ಉದ್ದೇಶಗಳನ್ನು ಸಮಗ್ರವಾಗಿ ವಿವರಿಸಿ "ಸಂಘದ ಸದಸ್ಯರಲ್ಲಿ ಹೆಚ್ಚಾಗುತ್ತಿರುವ ಪ್ರಮಾಣವನ್ನು ವಿವರಿಸುತ್ತ ಸಂಘವು ರಾಜ್ಯದ  ಎಲ್ಲ ವಿಶ್ವವಿದ್ಯಾಲಯಗಳಲ್ಲಿ ತನ್ನ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದೆ. ಕೇವಲ ಸಂಘವು ಕಾರ್ಯ ಚಟುವಟಿಕೆಗಳಿಗೆ ಸೀಮಿತವಾಗದೇ ಹೊಸ ಶಿಕ್ಷಣ ಧೋರಣೆಯ ಕುರಿತಾದ ಹಲವಾರು ವಿಚಾರ ಸಂಕಿರಣಗಳು ಹಾಗೂ ಆಯುಕ್ತರ ಕಚೇರಿಗಳಿಂದ ಮಾರ್ಗದರ್ಶಿಗಳು ಹೊಸ ಶಿಕ್ಷಣ ನೀತಿ ಅನುಷ್ಠಾನದ ಸಂದರ್ಭದಲ್ಲೇ ಸಂಘದ ಪಾತ್ರ ಮಹತ್ತರವಾಗಿದೆ." ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲ ಗಣ್ಯರನ್ನು ಸ್ವಾಗತಿಸಿದ ಸಂಘದ ಕಾರ್ಯದರ್ಶಿಯಾದ ಡಾ.ಮರಿದೇವರ ಮಠ ರವರು ಮಾತನಾಡುತ್ತಾ "ಸಂಘದ ಪ್ರಮುಖ ಧ್ಯೇಯಗಳನ್ನು ವಿವರಿಸಿದರು. ವಿಭಾಗದ ಮಹಿಳಾ ಪ್ರತಿನಿಧಿಯಾಗಿರುವ ಶ್ರೀಮತಿ ಸುಜಾತ, ಸಂಘದ ಸಂಘಟನಾ ಕಾರ್ಯದರ್ಶಿಯಾಗಿರುವ ಪ್ರಸನ್ನ ಪಂಢರಿ, ಪ್ರಾಂತ್ಯ ಕಾರ್ಯಾಲಯದ ಕಾರ್ಯದರ್ಶಿ ಅಭಿಷೇಕ ಕುಬಸದ ಹಾಗೂ ವಿಜಯನಗರ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯ ವಿಭಾಗದ ಮೂರು ಜಿಲ್ಲೆಗಳ ಅಧ್ಯಕ್ಷರಾದ ಪ್ರೊ. ಶರಣಬಸಪ್ಪ ಬಿಳೆಯಲೆ, ಪ್ರಾಚಾರ್ಯರು, ಉಪನ್ಯಾಸಕ ವೃಂದದವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಪ್ರಧಾನ ಕಾರ್ಯದರ್ಶಿ ಗುಂಡೂರು ಪವನ್ ಕುಮಾರ್ ನೆರವೇರಿಸಿದರು.

MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-03-2023
Date of Posting 20th or 21st of every month
Posted at Periodical Rate

# ಕೆ.ಆರ್.ಎಂ.ಎಸ್.ಎಸ್.ನ ಅಭ್ಯಾಸ ವರ್ಗ–ಒಂದು ವರದಿ



ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ (KRMSS) 26–27 ಫೆಬ್ರವರಿ, 2023 ರಂದು ಮೈಸೂರಿನ JSS ವಿದ್ಯಾಪೀಠದ ಸುತ್ತೂರಿನಲ್ಲಿ KRMSSನ ಕಾರ್ಯಕರ್ತರಿಗಾಗಿ ಎರಡು ದಿನಗಳ ಅಭ್ಯಾಸ ವರ್ಗವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರದ ಪ್ರಮುಖ ಉದ್ದೇಶವು ಶಿಕ್ಷಕರಿಗೆ ಸಂಘದ ಸಿದ್ಧಾಂತದ ಬಗ್ಗೆ ಮಾರ್ಗದರ್ಶನ ನೀಡುವುದಾಗಿದೆ. ಮತ್ತು ರಾಷ್ಟ್ರ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವರನ್ನು ಪ್ರೇರೇಪಿಸುವುದಾಗಿದೆ. ಂಃಖಖಒಗೆ ಸಂಯೋಜಿತವಾಗಿರುವ KRMSS "ರಾಷ್ಟ್ರದ ಹಿತಕ್ಕಾಗಿ ಶಿಕ್ಷಣ, ಶಿಕ್ಷಣದ ಹಿತಕ್ಕಾಗಿ ಶಿಕ್ಷಕ, ಶಿಕ್ಷಕನ ಹಿತಕ್ಕಾಗಿ ಸಮಾಜ" ಧ್ಯೇಯವಾಕ್ಯದೊಂದಿಗೆ ಕೆಲಸ ಮಾಡುತ್ತಿದೆ. ಕಾರ್ಯಾಗಾರದಲ್ಲಿ ರಾಜ್ಯದ ವಿವಿಧೆಡೆಯಿಂದ ಬುದ್ಧಿಜೀವಿಗಳು, ನೀತಿ ನಿರೂಪಕರು, ಶಿಕ್ಷಕರು ಭಾಗವಹಿಸಿದ್ದರು. ಅವರಲ್ಲಿ ಪ್ರಮುಖರೆಂದರೆ ಶ್ರೀ ಎನ್ ತಿಪ್ಪೇಸ್ವಾಮಿ, ಕ್ಷೇತ್ರೀಯ ಕಾರ್ಯವಾಹ, ಆರ್‌ಎಸ್‌ಎಸ್, ಶ್ರೀ ಜಿ. ಲಕ್ಷ್ಮಣ್, ಶ್ರೀ ಶಿವಾನಂದ ಸಿಂಧನಕೇರ, ಪ್ರಧಾನ ಕಾರ್ಯದರ್ಶಿ, ಎಬಿಆರ್‌ಎಸ್‌ಎಂ, ಶ್ರೀ ರವೀಂದ್ರ, ಹಿರಿಯ ಪ್ರಚಾರಕ್, ಶ್ರೀ ಸುಧೀರ್ ಜಿ, ಕ್ಷೇತ್ರೀಯ ಕಾರ್ಯವಾಹ, ಆರ್‌ಎಸ್‌ಎಸ್, ಶ್ರೀ ಜಗದೀಶ್. ಜಿ, ಡಾ ಗೌರೀಶ್, CESS ಬೆಂಗಳೂರು, ಡಾ. ಪದ್ಮಾವತಿ CESS ಬೆಂಗಳೂರು, ಡಾ ರಘು ಅಕಮಂಚಿ, ಅಧ್ಯಕ್ಷ KRMSS, ಶ್ರೀ ರಾಜಣ್ಣ, ಪ್ರಧಾನ ಕಾರ್ಯದರ್ಶಿ KRMSS ಮತ್ತು ಕರ್ನಾಟಕದ ಇತರ ಪದಾಧಿಕಾರಿಗಳು ಮತ್ತು ಕಾಲೇಜು ಶಿಕ್ಷಕರು. ರಾಷ್ಟ್ರ ಮತ್ತು ರಾಷ್ಟ್ರೀಯತೆ ಮತ್ತು ಇತರ ಸಿದ್ಧಾಂತಗಳು, NEP 2020 ರ ಮೇಲೆ ಒತ್ತು ನೀಡುವ ಉನ್ನತ ಶಿಕ್ಷಣದಲ್ಲಿ ಪ್ರಯೋಗಗಳು, ಕಾರ್ಯಕರ್ತರ ವಿಕಾಸ ಮತ್ತು ವೈಚಾರಿಕ ಮತ್ತು ಭಾರತದ ಪ್ರಸ್ತುತ ಸವಾಲುಗಳನ್ನು ಎದುರಿಸುವಲ್ಲಿ ಶಿಕ್ಷಕರ ಪಾತ್ರದಂತಹ ವಿವಿಧ ವಿಷಯಗಳ ಕುರಿತು ಚರ್ಚೆಗಳು. ಅಭ್ಯಾಸ ವರ್ಗದಲ್ಲಿ 122 ಅಧ್ಯಾಪಕರು ಭಾಗವಹಿಸಿದ್ದರು ಮತ್ತು ಎಲ್ಲಾ ರಾಜ್ಯ ಮತ್ತು ವಿಶ್ವವಿದ್ಯಾನಿಲಯ ವಿಭಾಗ ಸದಸ್ಯರು ಅಭ್ಯಾಸ ವರ್ಗದಲ್ಲಿ ಉಪಸ್ಥಿತರಿದ್ದರು.

ಅಭ್ಯಾಸ ವರ್ಗದ ಸಮಯದಲ್ಲಿ KRMSSನ ಹೊಸ ಸಂಸ್ಥೆಯನ್ನು ರಚಿಸಲಾಯಿತು. ಪ್ರೊ. ಕೆ. ವಿ. ಸುರೇಶ್ ಚುನಾವಣಾಧಿಕಾರಿಯಾಗಿದ್ದರು. ಮಹಾಸಭೆಯು ಕೆಆರ್‌ಎಂಎಸ್‌ಎಸ್‌ನ ರಾಜ್ಯಾಧ್ಯಕ್ಷರಾಗಿ ಡಾ.ಗುರುನಾಥ ಕೆ. ಬಡಿಗೇರ್, ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಡಾ.ರೋಹಿಣಿಕುಮಾರ ಹಿಳ್ಳಿ, ಖಜಾಂಚಿಯಾಗಿ ಡಾ.ಲಿಂಗರಾಜ ಹೊರಕೇರಿ, ಮಹಿಳಾ ಪ್ರಮುಖರಾಗಿ ಡಾ. ಸಂಗೀತಾ ಕಟ್ಟಿಮನಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಕಾರ್ಯಕಾರಿ ಮಂಡಳಿಯ ಇತರ ಸದಸ್ಯರನ್ನು ನೂತನ ಅಧ್ಯಕ್ಷರು ಘೋಷಿಸಿದರು. ವಂದೇ ಮಾತರಂನೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20



srushtidesigns@gmail.com